ಜನಪದ ವಿಚಾರ

ಬೆಲೆ ೧೦-೦೦

ಚಿಂತನ * ದರ್ಶನ * ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ-೬ ಜುಲೈ-೨೦೦೬ ಸಂಚಿಕೆ-೧೨

ಅಭಿವೃದ್ಧಿಯು ರಾಜಕಾರಣದಲ್ಲೋ, ರಾಜಕಾರಣವು ಅಭಿವೃದ್ಧಿಯಲ್ಲೋ?

✵

ನಿಸರ್ಗೋಪಚಾರ : ಇಂದು ಅವಶ್ಯ, ನಾಳೆ ಅನಿವಾರ್ಯ!

✵

ಚಲನಶೀಲಸಮಾಜಕ್ಕಾಗಿ ಕೆಲವು ಸಲಹೆ

ಜೀವದ ಕಣಜ

ಜನಪದ ವಿಚಾರ
ತಿಂಗಳ ವೈಚಾರಿಕ ಡೈಜೆಸ್ಟ್

ಜುಲೈ-೨೦೦೬
ಸಂಪುಟ-೬
ಸಂಚಿಕೆ-೧೨

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ-೫೭೧ ೪೩೧
ಮಂಡ್ಯ ಜಿಲ್ಲೆ

(08236)298754
e-mail-janapada@yahoo.com
www.janapada.org

ಕದ್ದರೆಂದು

ಅವರು ನಮ್ಮ ಪಾಲಿನ ರೊಟ್ಟಿ ಕದ್ದರೆಂದು
ನಾವು ದೂರುವುದು ಬೇಡ.
ಅವರ ಹೊಟ್ಟೆ ತಣ್ಣಗಿರಲಿ-
ನಮ್ಮ ಹೊಟ್ಟೆಗಳಿಗೆ ತಣ್ಣೀರು
ಸಮಾಧಾನ ಹೇಳಬಲ್ಲುದು.

ಅವರು ನಮ್ಮ ರಾತ್ರಿಯ ನಿದ್ದೆ ಕದ್ದರೆಂದು
ನಾವು ಹಲುಬುವುದು ಬೇಡ.
ಅವರ ನಿದ್ದೆಗೆ ಭಂಗವಾಗದಿರಲಿ
ಈ ನಿದ್ರಾಹೀನ ರಾತ್ರಿಗಳಲ್ಲಿ
ನಕ್ಷತ್ರಗಳು ನಮ್ಮ ಜೊತೆಗಿರುತ್ತವೆ.

ಅವರು ನಮ್ಮ ತುಟಿಯ
ಮೇಲಿನ ನಗೆಯ ಕದ್ದರೆಂದು
ನಾವು ದುಃಖಿಸುವುದು ಬೇಡ.
ಅವರು ಸದಾ ಮಂದಸ್ಮಿತರಾಗಿರಲಿ
ನಾವು ಇಡೀ ಜಗತ್ತಿನ ಕಣ್ಣೀರಿಗೆ
ಬೊಗಸೆಯಾಗೋಣ.

ಅವರು ನಮ್ಮ ರೊಟ್ಟಿ, ನಿದ್ರೆ
ಮತ್ತು ನಗೆಯನ್ನು ಕದ್ದದ್ದಕ್ಕೆ
ಒಂದು ಸಲ ನಾವು ಆ ಮೇಲಿನವನ
ಅದಾಲತ್ತಿನಲ್ಲಿ ನ್ಯಾಯ ಕೇಳೋಣ.
ಆದರೆ, ಸದ್ಯದ ಸ್ಥಿತಿ ಹೇಗಿದೆ ನೋಡು,
ಅವರು ಕದಿಯ ಬೇಕೆಂದರೂ
ನಮ್ಮ ಬಳಿ ಏನೂ ಉಳಿದಿಲ್ಲ!

ಅವರು ನಮ್ಮಷ್ಟೇ ನಿರುಪಾಯರಾದ
ಬಗ್ಗೆ ನನಗೆ ಖೇದವಿದೆ.

-ವಿಭಾ

ವಿಚಾರ ದೀಪ್ತಿ

ಬುದ್ಧಿಹೀನರಾಗಿ ಹಿಂದು ರಾಷ್ಟ್ರವನ್ನು ಅಳಿಸಿದ್ದೇಕೆ?

ನೇಪಾಳ ದೇಶದಲ್ಲಿ ಇತ್ತೀಚೆಗೆ ಉಂಟಾದ ಗಲಭೆಯ ಪರಿಣಾಮಗಳು ಮಹತ್ತರವಾದದ್ದು. ನೇಪಾಳ ದೊರೆಗೆ ಸಂಪೂರ್ಣ ಸೋಲಾಯಿತು. ಅವರ ಅಧಿಕಾರವನ್ನು ಮೊಟಕುಗೊಳಿಸಲಾಗಿ, ಹೆಸರಿಗೆ ಮಾತ್ರ ದೊರೆಯಾಗಿ ಉಳಿದರು. ಆದರೆ ಇದಕ್ಕಿಂತ ಮಹತ್ತರವಾದ ಪರಿಣಾಮ ಹಿಂದು ರಾಷ್ಟ್ರದ ಮೇಲೆ ಬಿತ್ತು. ಈ ದೇಶವು ಇಡಿ ವಿಶ್ವದಲ್ಲೇ ಒಂದೇ ಒಂದು ಹಿಂದು ರಾಷ್ಟ್ರವಾಗಿ ಉಳಿದಿತ್ತು. ದೇಶ ಚಿಕ್ಕದಾದರೂ ಕೀರ್ತಿ ಹೆಚ್ಚಿತ್ತು. ಹಿಂದು ರಾಷ್ಟ್ರವಾಗಿ ಎಲ್ಲಾ ಧರ್ಮಗಳ ಜನರ ಹಿತ ಚಿಂತನೆಯನ್ನು ತನ್ನ ಗಂಭೀರವಾದ ಗುರಿಯಾಗಿಟ್ಟುಕೊಂಡು ಎಲ್ಲರ ಪ್ರೀತಿ ವಿಶ್ವಾಸಕ್ಕೆ ಪಾತ್ರವಾಗಿತ್ತು. ಅಲ್ಪಸಂಖ್ಯಾತರ ಧಾರ್ಮಿಕ ಹಕ್ಕುಗಳಿಗೆ ಯಾವ ರೀತಿಯ ಅಡ್ಡಿ ಆತಂಕಗಳೂ ಇರಲಿಲ್ಲ. ಶೇ.೯೦ರಷ್ಟು ಹಿಂದು ಜನಸಂಖ್ಯೆ ಇದ್ದರೂ ಸಹ ಹಿಂದು ಸಂಸ್ಕೃತಿಯನ್ನು, ಹಿಂದು ಆಚಾರ ವ್ಯವಹಾರವನ್ನು, ಅಲ್ಪಸಂಖ್ಯಾತರ ಮೇಲೆ ಹೇರಲಿಲ್ಲ. ಮುಸಲ್ಮಾನರು, ಬೌದ್ಧರು, ಕ್ರೈಸ್ತರು ಯಾವ ಭಯಭೀತಿ ಇಲ್ಲದೆ ತಲೆ ತಗ್ಗಿಸದೆ, ಅನ್ಯಾಯಕ್ಕೆ ಗುರಿಯಾಗದೆ ಸರಿಸಮಾನ ಪ್ರಜೆಗಳಾಗಿದ್ದರು. ಮುಸಲ್ಮಾನರ ಮಸೀದಿಗಳು ಸುಭದ್ರವಾಗಿದ್ದವು. ಈ ಮಸೀದಿಗಳಿಗೆ ಯಾತ್ರಿಕರೂ ಹೋಗುತ್ತಿದ್ದರು. ಸ್ಥಳೀಯ ಹಿಂದು ಮಹಿಳೆಯರೂ ಸಹ ತಮ್ಮ ಅತಿಥಿಗಳನ್ನು ಈ ಮಸೀದಿಗಳಿಗೆ ಕರೆದುಕೊಂಡು ಹೋಗುತ್ತಿದ್ದರು. ನಾನು ಅನೇಕ ಸಲ ನೇಪಾಳಕ್ಕೆ ಹೋಗಿದ್ದೇನೆ. ನನ್ನನ್ನು ಬಹು ಪ್ರೀತಿ ವಿಶ್ವಾಸದಿಂದ ಬರಮಾಡಿಕೊಂಡರು. ಅಲ್ಲಿಯ ಅನೇಕ ಮುಖ್ಯ ಸ್ಥಳಗಳನ್ನು ತೋರಿಸಿದರು. ಮುಸ್ಲಿಂ ಧರ್ಮ ಗುರುಗಳನ್ನು ಭೇಟಿ ಮಾಡಿಸಿದರು. ಧರ್ಮಗುರುಗಳೂ ಸಹ ನೇಪಾಳ ಸರಕಾರ ಮತ್ತು ಬಹುಸಂಖ್ಯೆಯ ಹಿಂದುಗಳನ್ನು ಹೊಗಳಿದರು. ಕ್ರೈಸ್ತರೂ ಸಹ ನೆಮ್ಮದಿಯಿಂದಿದ್ದರು. ಒಂದೇ ಒಂದು ವಿಷಯದಲ್ಲಿ ಅವರಿಗೆ ಸ್ವಲ್ಪ ಅಸಮಾಧಾನವಿತ್ತು. ಇದೇ ಮತಾಂತರದ ಮೇಲೆ ಇದ್ದ ಅಡ್ಡಿ. ಸರಕಾರ ವ್ಯವಸ್ಥಿತ ಮತಾಂತರವನ್ನು ನಿಷೇಧಿಸಿತ್ತು. ಒಬ್ಬೊಬ್ಬರು ವೈಯಕ್ತಿಕವಾಗಿ ಮತಾಂತರಗೊಳ್ಳುವುದನ್ನು ತಡೆಯುತ್ತಿರಲಿಲ್ಲ. ಆದರೆ ಆಮಿಷವೊಡ್ಡಿ ಮತಾಂತರ ಮಾಡುವುದಕ್ಕೆ ಸರಕಾರ ಪ್ರೋತ್ಸಾಹ ಕೊಡಲಿಲ್ಲ.

ಈ ಹಿಂದು ರಾಷ್ಟ್ರದ ಇನ್ನೊಂದು ವೈಶಿಷ್ಟ್ಯತೆ ಏನೆಂದರೆ ಹಿಂದು ರಾಷ್ಟ್ರವಾಗಿ ಪಾಕಿಸ್ತಾನದೊಡನೆ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ

ಸಂಬಂಧ ಭಾರತದೊಂದಿಗಿದ್ದ ಸಂಬಂಧಕ್ಕಿಂತ ಹೆಚ್ಚು ಹಿತಕರವಾಗಿ ಮತ್ತು ಪ್ರಯೋಜನಕಾರಿಯಾಗಿತ್ತು. ಭಾರತದಲ್ಲಿ ಶೇ.೮೦ರಷ್ಟು ಹಿಂದುಗಳಿದ್ದಾರೆ, ನೇಪಾಳದಲ್ಲಿ ಶೇ.೯೦ರಷ್ಟು ಹಿಂದುಗಳಿದ್ದಾರೆ ಎಂದು ಕೇವಲ ಸಂಖ್ಯೆಗಳ ಆಧಾರದ ಮೇಲೆಯೇ ಯಾವ ವಿಶೇಷವಾದ ಸಂಬಂಧ ಇರಲಿಲ್ಲ. ಭಾರತ ಒಂದು ಜಾತ್ಯತೀತ ದೇಶ, ನೇಪಾಳ ಒಂದು ಹಿಂದು ರಾಷ್ಟ್ರ. ಆದರೆ ಗಣನೀಯವಾದ ವ್ಯತ್ಯಾಸವಿರಲಿಲ್ಲ. ಹಿಂದು ರಾಷ್ಟ್ರವೆಂದರೆ ಹಿಂದುಗಳ ದಬ್ಬಾಳಿಕೆ, ಹಿಂದುಗಳ ಪ್ರಾಧಾನ್ಯತೆ, ಅಲ್ಪಸಂಖ್ಯಾತರ ಹೀನಾಯವಾದ ಪರಿಸ್ಥಿತಿ, ಅಲ್ಪಸಂಖ್ಯಾತರು ಹಿಂದುಗಳಿಗೆ ಅಧೀನರಾಗಿರಬೇಕು. ಅಲ್ಪಸಂಖ್ಯಾತರ ಧಾರ್ಮಿಕ ಹಕ್ಕುಗಳ ಸಂಕುಚಿತವಾಗಿರುವುದು. ಈ ರೀತಿ ಅನೇಕ ತರಹದ ವಿಚಾರಧಾರೆ ಅನೇಕರ ಮನಸ್ಸಿನಲ್ಲಿರುವುದು. ಇದನ್ನೆಲ್ಲ ಸುಳ್ಳಾಗಿ ಮಾಡಿದೆ ನೇಪಾಳದ ಹಿಂದು ರಾಷ್ಟ್ರ. ಇಸ್ಲಾಂ ರಾಷ್ಟ್ರಗಳಿವೆ, ಕ್ರೈಸ್ತ ರಾಷ್ಟ್ರಗಳಿವೆ, ಬೌದ್ಧ ರಾಷ್ಟ್ರಗಳಿವೆ ಆದರೆ ಹಿಂದು ರಾಷ್ಟ್ರ ಏಕಾಗಿರಬಾರದು. ನೇಪಾಳ ರಾಜಕೀಯ ಧುರೀಣರು ಮಹತ್ತರವಾದ ರಾಜಕೀಯ ಪರಿವರ್ತನೆಯನ್ನು ತಂದಿದ್ದಾರೆ. ಇದು ಪ್ರಜೆಗಳ ಹಿತದಲ್ಲಿರುವುದರಿಂದ ನಾವು ಸ್ವಾಗತಿಸಬೇಕು. ಆದರೆ ಹಿಂದು ರಾಷ್ಟ್ರವಾಗಿರುವುದನ್ನು ತಪ್ಪಿಸಿದ್ದೇಕೆ?

ಮುಸಲ್ಮಾನರು ಅಡ್ಡಿ ಬಂದಿದ್ದರೆ ಅಥವಾ ಕ್ರೈಸ್ತರು, ಬೌದ್ಧರು ಅಡ್ಡಿ ಬಂದಿದ್ದರೆ? ಬೇರೆ ರಾಷ್ಟ್ರದವರು ಒತ್ತಡ ತಂದಿದ್ದರೆ? ಒಂದು ವೇಳೆ ಇದು ನಿಜವಾಗಿದ್ದರೂ ನೇಪಾಳದ ಹಿಂದುಗಳು ಬುದ್ಧಿಹೀನರಾಗಿ ಹಿಂದು ರಾಷ್ಟ್ರವನ್ನು ಅಳಿಸಿದ್ದೇಕೆ? ಕೇವಲ ಜಾತ್ಯತೀತ ಸಮಾಜ ಅಥವಾ ಸರಕಾರ ಎಂದು ಘೋಷಿಸಿದರೆ ಸಾಲದು. ಅಂತಃಕರಣವನ್ನು ಪರೀಕ್ಷಿಸಿದರೆ ಬಂಡವಾಳ ಗೊತ್ತಾಗುವುದು. ಕೇವಲ ಅಲ್ಪಸಂಖ್ಯಾತರನ್ನು ಹುರಿದುಂಬಿಸಲು ಮತ್ತು ಅವರಿಂದ ರಾಜಕೀಯ ಲಾಭ ಪಡೆಯಲು ಈ ನಾಟಕ ಮಾಡುವುದು ಸರಿಯೇ? ನೇಪಾಳವು ಹಿಂದು ರಾಷ್ಟ್ರವಾಗಿ ಉಳಿಯಬೇಕಿತ್ತು. ಇಡೀ ವಿಶ್ವಕ್ಕೆ ಒಂದು ಮಾದರಿ ರಾಷ್ಟ್ರವಾಗಿರುತ್ತಿತ್ತು. ಇಂತಹ ಅವಕಾಶವನ್ನು ಅಲ್ಲಿಯ ಜನರು ಕಳೆದುಕೊಂಡರು. ಈ ಅವಕಾಶವನ್ನು ಮತ್ತೆ ಪಡೆಯಲು ಸಾಧ್ಯವಾಗದು. ಬಹು ಸುಲಭವಾಗಿ, ಪ್ರಯಾಸವಿಲ್ಲದೆ ಹಿಂದು ರಾಷ್ಟ್ರ ಎಂಬ ಕೀರ್ತಿಗೆ ತಿಲಾಂಜಲಿ ಕೊಟ್ಟರು. ಮತ್ತೆ ಪಡೆಯಬೇಕಾದರೆ ಒಂದು ದೊಡ್ಡ ವಿರೋಧವನ್ನು ಎದುರಿಸಬೇಕಾತ್ತದೆ.

ಡಾ॥ ಮುಮ್ತಾಜ್ ಅಲಿಖಾನ್

***

ಅಭಿವೃದ್ಧಿಯು ರಾಜಕಾರಣದಲ್ಲೋ, ರಾಜಕಾರಣವು ಅಭಿವೃದ್ಧಿಯಲ್ಲೋ?

-ಸುರೇಂದ್ರ ಕೌಲಗಿ

"ಸಿಹಿಯು ಸಕ್ಕರೆಯೊಳಗೋ, ಸಕ್ಕರೆಯು ಸಿಹಿಯೊಳಗೊ" ಎಂದು ದಾಸರು ಕೇಳಿದ ಯಕ್ಷಪ್ರಶ್ನೆಯಂತೆಯೇ ಅಭಿವೃದ್ಧಿಯೊಳಗೆ ರಾಜಕಾರಣವೋ, ರಾಜಕಾರಣದಲ್ಲಿ ಅಭಿವೃದ್ಧಿಯೋ ಎಂಬ ಮಾತು ಸಹ ಇದೆ.

೧೯೫೧ ರಲ್ಲಿ ದೇಶದ ಅಭಿವೃದ್ಧಿಗಾಗಿ ಪಂಚವಾರ್ಷಿಕ ಯೋಜನೆಗಳ ಸರಮಾಲೆ ಶುರುವಾಯಿತು. ಆ ಅಭಿವೃದ್ಧಿ ಯೋಜನೆಗಳ ಉದರದಲ್ಲಿಯೇ ರಾಜಕಾರಣವೂ ಸೇರಿಕೊಂಡಿತು. ಆದ್ದರಿಂದ ದೇಶದ ಯಾವುದೇ ಭಾಗದಲ್ಲಿ, ಯಾವುದೇ ಪ್ರಕಾರದ ಅಭಿವೃದ್ಧಿಯೋಜನೆ ಪ್ರಾರಂಭವಾಗಲಿ ಅಲ್ಲೆಲ್ಲ ಅಭಿವೃದ್ಧಿಯ ಜೊತೆಜೊತೆಯಲ್ಲಿಯೇ ರಾಜಕಾರಣವೂ ಹುಟ್ಟಿಕೊಂಡಿತು. ಹಳ್ಳಿಯ ಅಭಿವೃದ್ಧಿಯಿಂದ ದಿಳ್ಳಿಯ ಅಭಿವೃದ್ಧಿಯವರೆಗಿನ ಎಲ್ಲ ಪ್ರಕಾರದ ಅಭಿವೃದ್ಧಿಕೆಲಸಗಳಲ್ಲಿ ರಾಜಕಾರಣ ಹಾಸುಹೊಕ್ಕಾಗಿ ಬೆರತುಹೋಯಿತು. ಅಭಿವೃದ್ಧಿ ಮತ್ತು ರಾಜಕಾರಣ ಎಷ್ಟೊಂದು ಬೆರೆತುಕೊಂಡವೆಂದರೆ ರಾಜಕಾರಣದ ಅರ್ಥ ಅಭಿವೃದ್ಧಿಯೆಂತಲೂ, ಅಭಿವೃದ್ಧಿಯ ಅರ್ಥ ರಾಜಕಾರಣವೆಂತಲೂ ಆಯಿತು. ಒಂದು ಇನ್ನೊಂದಕ್ಕೆ ಪರ್ಯಾಯವಾಯಿತು. ಅನೇಕ ಸಲ ಅಭಿವೃದ್ಧಿಗಿಂತ ರಾಜಕಾರಣದ ಕೈಯೇ ಮೇಲಾಗಿ ಅಭಿವೃದ್ಧಿಯೆಂಬುದು ಜನತೆಗೆ ವರವಾಗುವುದರ ಬದಲು ಶಾಪವಾಯಿತು. ಜನತೆಯ ಆಕ್ರಂದನ, ಜನತೆಯ ಹತಾಶೆ, ಜನತೆಯ ಗೋಳಾಟದ ಮಧ್ಯೆ ಗೆಲುವಿನ ಸ್ಪರ್ಧಾತ್ಮಕ ರಾಜಕಾರಣ ಹುಟ್ಟಿತು, ಉತ್ಸಾಹದ ಯುವ ರಾಜಕಾರಣಿಗಳು ಹುಟ್ಟಿಕೊಂಡರು, ಮತದಾರರನ್ನು ತುಷ್ಟಿಪುಷ್ಟಿಗೊಳಿಸುವ ರಾಜಕಾರಣ ಪ್ರಾರಂಭವಾಯಿತು. ಜೊತೆಗೆ ಭ್ರಷ್ಟಾಚಾರವು ಹುಟ್ಟಿಕೊಂಡಿತು. ಸರ್ಕಾರಗಳು ಉರುಳಿದವು, ಹೊಸ ಸರ್ಕಾರಗಳು ಬಂದವು. ಎಲ್ಲೆಲ್ಲೂ ರಾಜಕೀಯ ಅಸ್ಥಿರತೆ, ಆಡಳಿತದ ಅತಂತ್ರತೆ ಉಂಟಾಯಿತು. ಜನರಲ್ಲಿ ಹಣದದಾಹ ಹೆಚ್ಚಾಯಿತು, ನೈತಿಕಮೌಲ್ಯಗಳು ಕುಸಿದವು. ದೇಶದ ಪ್ರಗತಿ ವಿಗತಿಯಾಗಲು ಪ್ರಾರಂಭಿಸಿತು.

ದೇಶಕ್ಕೆ ಸ್ವಾತಂತ್ರ್ಯಬಂದ ಮೇಲೆ ಅಭಿವೃದ್ಧಿಯ ಯುಗ ಪ್ರಾರಂಭವಾಯಿತು. ಆದರೆ ಇದುವರೆಗೂ ಅಭಿವೃದ್ಧಿಯ ವ್ಯಾಖ್ಯೆಯನ್ನು ಸ್ಪಷ್ಟಪಡಿಸಿಕೊಳ್ಳಲು ಆಗಿಲ್ಲ. ಅಧಿಕಾರರೂಢ ಪಕ್ಷದ ಅನುಕೂಲಕ್ಕೆ ತಕ್ಕಂತೆ ಅಭಿವೃದ್ಧಿಯ ವ್ಯಾಖ್ಯೆ ಬದಲಾಗುತ್ತಾ ಬಂತು. ಅಭಿವೃದ್ಧಿಯೆಂಬ ಪ್ರಹಸನದಲ್ಲಿ ರಾಜಕಾರಣಿಗಳು ಮತ್ತು ಅಧಿಕಾರಿಗಳು ಪ್ರಮುಖ ಪಾತ್ರಧಾರಿಗಳಾದರು. ಈ ಇಬ್ಬರು ಪಾತ್ರಧಾರಿಗಳು ತಮ್ಮ ಕೈಚಳಕದಿಂದ,

ಭರವಸೆಗಳ ಮಹಾಪೂರದಿಂದ ಪ್ರೇಕ್ಷಕರನ್ನು ಮಂತ್ರಮುಗ್ಧರನ್ನಾಗಿ ಮಾಡಿದರು. ಶೂನ್ಯವತ್ತಾಗಿ ಮಾಡಿದರು. ಜನತೆಯ ಹಿತದ ದೃಷ್ಟಿಯಿಂದ ಪ್ರಾರಂಭವಾದ ಅಭಿವೃದ್ಧಿಯ ಅನುಷ್ಠಾನದಲ್ಲಿ ಜನತೆಯ ಪಾತ್ರ ಗೌಣವಾಗುತ್ತಾ ಬಂತು. ಜನತೆ ನೇಪಥ್ಯಕ್ಕೆ ಸರಿಯಿತು. ರಾಜಕಾರಣಿಗಳು ಮತ್ತು ಅಧಿಕಾರಿಗಳು ವೇದಿಕೆಯನ್ನು ಆಕ್ರಮಿಸಿಕೊಂಡರು.

ಪ್ರಜಾಪ್ರಭುತ್ವದಲ್ಲಿ ಪ್ರಜೆಗಳೇ ಪ್ರಭುಗಳು ಎಂಬ ಮಾತು ಸುಳ್ಳಾಯಿತು. ಬದಲಿಗೆ ಅಧಿಕಾರಿಗಳು ಮತ್ತು ರಾಜಕಾರಣಿಗಳು ಮತದಾರನ ಹೆಗಲ ಮೇಲೆ ಸವಾರಿಮಾಡುವ ಬೇತಾಳರಾದರು.

ಹಳ್ಳಿಯಿಂದ ಪ್ರಾರಂಭವಾಗಿ ದಿಲ್ಲಿಯವರೆಗೆ ವರ್ತುಲಾಕಾರದಲ್ಲಿ ಬೆಳೆಯುತ್ತಾ ಹೋಗಬೇಕಾಗಿದ್ದ ಅಭಿವೃದ್ಧಿಯ ಪ್ರಕ್ರಿಯೆ ಇಂದು ತಲೆಕೆಳಗಾಗಿದೆ. ಈಗ ದಿಲ್ಲಿಯಿಂದ ಪ್ರಾರಂಭವಾಗಿ ಹಳ್ಳಿಯ ಕಡೆಗೆ ಬಂದು ಕೊನೆಗೆ ಹಳ್ಳಿಯ ಕುತ್ತಿಗೆಗೆ ನೇಣುಹಾಕುವ ಯಮಪಾಶವಾಗಿದೆ.

೧೯೪೦ರಷ್ಟು ಹಿಂದೆಯೇ ಗಾಂಧೀಜಿ ಹರಿಜನ ಪತ್ರಿಕೆಯಲ್ಲಿ "ಕೈಗಾರಿಕರಣದಲ್ಲಿ ಕೇಡುಗಳು ನಿಹಿತವಾಗಿವೆ. ಎಷ್ಟೇ ದೊಡ್ಡಪ್ರಮಾಣದ ಸಾಮಾಜಿಕ ಚಿಂತನೆಯೂ ಆ ಕೇಡುಗಳನ್ನು ಅಳಿಸಲಾರವು" ಎಂದು ಅವರು ಹೇಳಿದ ಮಾತು ಈಗ ಎಲ್ಲರ ಅನುಭವಕ್ಕೆ ಬರುತ್ತಿದೆ.

ಅಭಿವೃದ್ಧಿಯು ಸಮಾಜದ ಮೇಲೆ ನಕಾರಾತ್ಮಕ ಪರಿಣಾಮ ಉಂಟು ಮಾಡುತ್ತಿದೆ. ಏಕೆಂದರೆ ಅಭಿವೃದ್ಧಿಯೆಂಬ ರೈಲು ಮುಂದೆ ಚಲಿಸಬೇಕಾದರೆ ಹಣವೆಂಬ ಇಂಧನ ಬೇಕು. ನಮ್ಮ ದೇಶದಲ್ಲಿ ಈ ಹಣರೂಪಿ ಇಂಧನ ಸಾಲದೆಂಬ ಕಾರಣಕ್ಕಾಗಿ ನಮ್ಮ ಸರ್ಕಾರ ವಿಶ್ವಬ್ಯಾಂಕ್, ಅಂತರರಾಷ್ಟ್ರೀಯ ಹಣಕಾಸು ನಿಧಿ ಮುಂತಾದ ಸಂಸ್ಥೆಗಳನ್ನಲ್ಲದೆ ವಿಶ್ವದ ಎಲ್ಲ ಶ್ರೀಮಂತ ರಾಷ್ಟ್ರಗಳ ಬಳಿ ಭಿಕ್ಷೆ ಎತ್ತುತ್ತಿದೆ, ಸಾಲ ಮಾಡುತ್ತಿದೆ. ತನ್ಮೂಲಕ ತನಗರಿವಿಲ್ಲದೆಯೆ ತನ್ನ ರಾಜಕೀಯ ಸ್ವಾತಂತ್ರ್ಯವನ್ನು ಕಳೆದುಕೊಳ್ಳುತ್ತಿದೆ. ಇಲ್ಲಿ ರವೀಂದ್ರನಾಥ ಟಾಗೋರರ ಮಾತು ನೆನಪಿಗೆ ಬರುತ್ತದೆ. "ಬೇಡುವವನು ವ್ಯಕ್ತಿಯಾದರೇನು, ದೇಶವಾದರೇನು ಬೇಡುವುದು ಭಿಕ್ಷೆಯೇ! ನಾವು ಬೇಕಾದುದನ್ನೆಲ್ಲ ಬ್ರಿಟಿಷರಿಂದ ಬೇಡಬಹುದು ಆದರೆ ಸ್ವಾವಲಂಬನೆಯನ್ನು ಬೇಡುವುದು ಸಾಧ್ಯವೇ?" ಅಂದು ರವೀಂದ್ರರು ಹೇಳಿದ ಆ ಮಾತು ಇಂದೂ ನಿಜವಾಗಿದೆ. ಅಭಿವೃದ್ಧಿಯು ದೇಶವನ್ನು ಸ್ವಾವಲಂಬಿತವನ್ನಾಗಿ ಮಾಡದೆ ಪರಾವಲಂಬಿತವನ್ನಾಗಿ ಮಾಡಿದೆ. ೧೯೪೭ರ ಪೂರ್ವದಲ್ಲಿ ಭಾರತೀಯರಲ್ಲಿ ಒಂದು ಬಗೆಯ ದಾಸ್ಯ ಮನೋಭಾವ ಇದ್ದರೆ ಈಗ ಸ್ವಾತಂತ್ರ್ಯಾನಂತರ ಇನ್ನೊಂದು ಬಗೆಯ ದಾಸ್ಯಮನೋಭಾವ ಇದೆ. ಸ್ವಾತಂತ್ರ್ಯಕ್ಕೆ ಮೊದಲು ದಾಸ್ಯ, ಸ್ವಾತಂತ್ರ್ಯಬಂದ ನಂತರವೂ ದಾಸ್ಯ ಉಂಟಾಗಿದೆ. ಈ ಅಭಿವೃದ್ಧಿಯೆಂಬ ರಜೋತಮೋಗುಣಗಳು ಮನುಷ್ಯನನ್ನು ಸುಮ್ಮನೆ ಕೂಡದಂತೆ ಮಾಡುತ್ತವೆ. ಅಮಾನುಷ ಕೆಲಸಗಳಲ್ಲಿ ತೊಡಗಿಸುವವು. ವಿನೋಬಾ ಆ ಗುಣಗಳ ಬಗ್ಗೆ ಹೀಗೆ ಹೇಳಿದ್ದಾರೆ. "ಇತ್ತಣ ಗುಡ್ಡ ಕಡಿದು ಅತ್ತಣ ಕಂದಕ ತುಂಬು. ಸಮುದ್ರಕ್ಕೆ ಮಣ್ಣು ಹೊತ್ತು ಅದನ್ನು ಮುಚ್ಚು, ಸಹರಾ ಮರುಭೂಮಿಯಲ್ಲಿ

ಸಮುದ್ರ ತೋಡು, ಸೂಯೆಜ್ ಕಾಲುವೆ ತೋಡು, ಅಲ್ಲಿ ಪನಾಮ ಕಟ್ಟು, ಇಂಥ ಸಲ್ಲದ ಗೊಂದಲದ ಹವ್ಯಾಸ, ಇದನ್ನು ಮುರಿ ಅದನ್ನು ಕಟ್ಟು". ಇಂಥದೇ ಹುಚ್ಚಾಟವು ಅಭಿವೃದ್ಧಿಯ ಹೆಸರಿನಲ್ಲಿ ರಾಜಕಾರಣವನ್ನು ಸೇರಿಸಿಕೊಂಡು ಈಗ ಎಲ್ಲ ನಗರಗಳಲ್ಲಿ, ಹಳ್ಳಿಗಳಲ್ಲಿ ನಡೆಯುತ್ತಿಲ್ಲವೆ? ಅದು ಬೆಂಗಳೂರಿನ ಬಿ.ಎಂ.ಐ.ಸಿ. ಯೋಜನೆ ಇರಬಹುದು, ನರ್ಮದಾ ಅಣೆಕಟ್ಟಿನ ಎತ್ತರ ಹೆಚ್ಚಿಸುವ ವಿಷಯವಿರಬಹುದು, ಕೇಂದ್ರ ಸರ್ಕಾರವು ರಾಜ್ಯಸರ್ಕಾರಗಳಗೆ ಕೊಡುವ ಅನುದಾನವಿರಬಹುದು, ಅವಕಾಶವಂಚಿತರ ಅಭಿವೃದ್ಧಿಯ ಹೆಸರಿನಲ್ಲಿ ಮೀಸಲಾತಿಯ ವಿಷಯವೇ ಇರಬಹುದು. ಅಭಿವೃದ್ಧಿಯೆಂಬ ಮರೀಚಿಕೆಯ ಬೆನ್ನಹತ್ತಿರುವ ಸರ್ಕಾರಗಳು ದೊಡ್ಡ ದೊಡ್ಡ ಬಂಡವಾಳಶಾಹಿಗಳ ಕೈಗೊಂಬೆಗಳಾಗಿವೆ. ರಾಜಕಾರಣಿಗಳು ಮಾರಾಟ ಮತ್ತು ಖರೀದಿಯ ವಾಣಿಜ್ಯವಸ್ತುಗಳಾಗಿದ್ದಾರೆ.

ಅಭಿವೃದ್ಧಿಯ ಇನ್ನೊಂದು ದುರಂತವೆಂದರೆ ಕೃಷಿಭೂಮಿಯೆಲ್ಲ ಕಟ್ಟಡಗಳಿಂದ ಆವೃತಗೊಳ್ಳುತ್ತಿರುವುದು. ತುಂಬಾ ಇತ್ತೀಚಿಗಿನ ಉದಾಹರಣೆಯೆಂದರೆ ಕೈಗಾರಿಕೋದ್ಯಮಿಯಾದ ಮುಖೇಶ್ ಅಂಬಾನಿಯವರ ವಿಶೇಷ ಆರ್ಥಿಕ ವಲಯ ಯೋಜನೆ(SEZ)ದಿಲ್ಲಿಯಿಂದ ತುಸು ದೂರದಲ್ಲಿರುವ ಹರ್ಯಾಣದಲ್ಲಿ ಒಂದು ನೂರು ಚದರ ಕಿ.ಮಿ. ಪ್ರದೇಶವನ್ನು ಆಕ್ರಮಿಸಿಕೊಳ್ಳಲಿದೆ! ಇಂಥ ಬೃಹತ್ ಅಭಿವೃದ್ಧಿ ಯೋಜನೆ ರಾಜಕಾರಣ ಸೇರದೆ ಜಾರಿಗೆ ಬರಲು ಸಾಧ್ಯವಿಲ್ಲ. ಈ ಯೋಜನೆಯಿಂದಾಗಿ ಸುಮಾರು ಐದು ಸಾವಿರ ರೈತರು ಹಣದ ಆಸೆಯಿಂದ ತಮ್ಮ ಸುಸ್ಥಿರ ಜೀವನಾಧಾರಿತ ಅಮೂಲ್ಯ ಭೂಮಿಯನ್ನು ಶಾಶ್ವತವಾಗಿ ಕಳೆದುಕೊಳ್ಳಲಿದ್ದಾರೆ. ಈ ಬೃಹತ್ ಯೋಜನೆಯ ಹಿಂದೆ ರಾಜಕಾರಣದ ಕೈವಾಡವಿಲ್ಲದೆ ಇಲ್ಲ.

ಇನ್ನು ನಮ್ಮ ರಾಜ್ಯದ ಬಿ.ಎಂ.ಐ.ಸಿ.ಯೋಜನೆಯನ್ನೇ ಗಮನಿಸಿದರೆ ರಾಜ್ಯದ ಅಭಿವೃದ್ಧಿಗಾಗಿ ಎಂದು ಹೇಳುವ ಈ ಯೋಜನೆಯ ಗರ್ಭದಲ್ಲಿ ಎಂಥೆಂಥ ಪಾಪದ ಕುನ್ನಿಗಳಿವೆ ಎಂಬುದು ದಿನಗಳೆದಂತೆ ಜನರಿಗೆ ಗೊತ್ತಾಗುತ್ತಿದೆ. ಆ ಯೋಜನೆಯ ಪಂಚಾಂಗ ಹೊರ ಬೀಳುತ್ತಿದ್ದರೆ ದಾಸರ ವಾಣಿ ಧಾಟಿಯ "ಅಭಿವೃದ್ಧಿಯೊಳು ರಾಜಕಾರಣವೋ, ರಾಜಕಾರಣದೊಳು ಅಭಿವೃದ್ಧಿಯೋ" ಎಂಬ ಪಲ್ಲವಿ ಸಹಜವಾಗಿಯೇ ಮನಸ್ಸು ಗುಣಗುಡುತ್ತದೆ. ಅಲ್ಲದೆ ನಮ್ಮ ರಾಜ್ಯದ ಹಿರಿಯ ಪರಿಸರ ಪ್ರೇಮಿ ನಾಗೇಶ್‌ಹೆಗಡೆಯವರು ಹೇಳುವಂತೆ "ಇಂದು ಇಡೀ ಭೂಮಂಡಲವೇ ಸಮಸ್ಯೆಗಳ ಮಡುವಾಗಿದೆ. ಹಿಂದೆಲ್ಲ ದುಷ್ಟ ಉದ್ದೇಶಗಳಿಂದಾಗಿಯೇ ಸಮಸ್ಯೆಗಳ ಸೃಷ್ಟಿಯಾಗುತ್ತಿತ್ತು. ಇಂದು ಹಾಗಲ್ಲ. ತನ್ನವರ ಏಳಿಗೆಯ ಸದುದ್ದೇಶದಿಂದ ಮಾನವ ಮಾಡುವ ಕೆಲಸಗಳಿಂದಲೇ ಹೊಸ ಹೊಸ ಸಮಸ್ಯೆ ಉದ್ಭವವಾಗುತ್ತಿದೆ. ನಮ್ಮ ಸೌಕರ್ಯಗಳು ಇನ್ನೂ ಹೆಚ್ಚುತ್ತಾ ಹೋಗಬೇಕೆ? ಅಥವಾ ಇಷ್ಟು ಪ್ರಗತಿಯಾದದ್ದೇ ಸಾಕೆಂದು ಏಳಿಗೆಯನ್ನೇ ಸ್ಥಗಿತಗೊಳಿಸಬೇಕೆ? ಎಂಬೀ ಪ್ರಶ್ನೆ ಬಹುಸಮಂಜಸವಾಗಿರುವಂತೆ ಅನಿಸುತ್ತದೆ.

***

ಕನ್ನಡದ ಸಿದ್ಧಹಸ್ತ ಸಿದ್ಧವನಹಳ್ಳಿಯವರ ನೆನಪಿನಲ್ಲಿ

-ಹಾ.ಮಾ. ನಾಯಕ್

(ಜುಲೈ ೪ ಕೃಷ್ಣಶರ್ಮರ ಜನ್ಮದಿನದ ನೆನಪಿನಲ್ಲಿ ಈ ಲೇಖನ.)

ಸಮಕಾಲೀನ ಕನ್ನಡದ ಬಹುಮಂದಿ ಸಾಹಿತಿಗಳೊಡನೆ ಸಂಪರ್ಕವಿರಿಸಿಕೊಳ್ಳುವ ಅವಕಾಶಗಳು ಸಂದರ್ಭಗಳು ಸಾಕಷ್ಟು ನನಗೆ ಒದಗಿದವು. ಆದರೆ ಕೃಷ್ಣಶರ್ಮರೊಡನೆ ಹಾಗೆ ವ್ಯವಹರಿಸುವುದು ಮಾತ್ರ ಯಾಕೋ ಸಾಧ್ಯವಾಗಲಿಲ್ಲ. ಇದು ನನಗೆ ಈಗ ಆಶ್ಚರ್ಯವನ್ನುಂಟುಮಾಡುತ್ತಿದೆ. ಮೂವತ್ತು ವರ್ಷಗಳಿಗೂ ಹಿಂದೆ ನಾನು ಮಾಧ್ಯಮಿಕ ಶಾಲೆಯಲ್ಲಿ ಈದುತ್ತಿದ್ದ ದಿನಗಳಲ್ಲಿ 'ವಿಶ್ವಕರ್ನಾಟಕ' ಪತ್ರಿಕೆಯನ್ನು ಓದುತ್ತಿದ್ದೆ. ಅದರ ವಾರದ ಸಾಹಿತ್ಯ ಸಂಚಿಕೆಗಳು, ಅವುಗಳೊಳಗಿನ ಮಕ್ಕಳ ವಿಭಾಗ ಇನ್ನೂ ನನ್ನ ನೆನಪಿನಲ್ಲಿವೆ. ಸಿದ್ಧವನಹಳ್ಳಿಯವರು ಹೆಸರು ಆಗಲೇ ನನಗೆ ಪರಿಚಯವಾಯಿತು; ಆದರೆ ಅದರ ಮಹತ್ವವನ್ನು ತಿಳಿಯಲು ತುಂಬ ಚಿಕ್ಕವನಿದ್ದೆ. ಪ್ರೌಢಶಾಲೆಗೆ ಬಂದಾಗ ಮಿನೂ ಮಸಾನಿ ಅವರ 'ಅವರ್ ಇಂಡಿಯಾ' ಎಂಬ ಪುಸ್ತಕ ಪಠ್ಯವಾಗಿತ್ತು. ನಾನು ಕನ್ನಡ ಮಾಧ್ಯಮದ ವಿಧ್ಯಾರ್ಥಿ. ನನಗೆ ಅದರ ಕನ್ನಡ ಆವೃತ್ತಿ ಪಠ್ಯ. ಈ ಆವೃತ್ತಿ 'ನಮ್ಮ ಹಿಂದೂಸ್ಥಾನ' ವನ್ನು ಸಿದ್ಧಪಡಿಸಿದವರು ಸಿದ್ಧವನಹಳ್ಳಿ ಕೃಷ್ಣಶರ್ಮರು, ಅದು ನಾನು ಓದಿದ ಶರ್ಮರ ಮೊದಲನೆಯ ಪುಸ್ತಕ. ಅದರ ಭಾಷಾಂತರ ಬರವಣಿಗೆ ನನ್ನನ್ನು ಸೂಜಿಗಲ್ಲಿನಂತೆ ಆಕರ್ಷಿಸಿತು. ಪುಸ್ತಕದ ಆರಂಭವೇ ಮೋಹಕ: ಎಳೆಯ ಮನಸ್ಸಿನ ಮೇಲೆ ಅಚ್ಚೊತ್ತಿ ನಿಲ್ಲುವಷ್ಟು ಪ್ರಭಾವ.

"ಜಗತ್ತಿನ ಜನತೆಯಲ್ಲಿ ಐವರಿಗೊಬ್ಬ ಭಾರತೀಯ. ಉಳಿದ ನಾಲ್ಕು ಜನರಲ್ಲಿ ಒಬ್ಬ ಅಮೇರಿಕಾದವನು, ಯೂರೋಪಿನವನೊಬ್ಬ, ಒಬ್ಬ ನೀಗ್ರೋ, ಒಬ್ಬ ಚೀನೀ ಎಂದು ಲೆಕ್ಕ ಹಿಡಿಯುವ, ಇಲ್ಲಿ ನೋಡು ಅವರನ್ನೆಲ್ಲ ಲೆಕ್ಕ ಎಣಿಸುತ್ತಿದ್ದಾರೆ. ಇದನ್ನು ನೋಡಿದರೆ ನಿನಗೂ ಒಂದು ಪ್ರಾಮುಖ್ಯತೆಯಿದೆ ಅನಿಸುವುದಿಲ್ಲವೆ? ನಾವು ಹಿಂದೀ ಜನ, ಪ್ರಪಂಚದ ಜನಸಂಖ್ಯೆಯಲ್ಲಿ ಹೆಚ್ಚು ಕಡಿಮೆ ಐದರಲ್ಲಿ ಒಂದು ಪಾಲು; ಚೀನಾದೇಶವನ್ನು ಬಿಟ್ಟರೆ ನಮ್ಮ ದೇಶದ ಜನಸಂಖ್ಯೆಯೇ ಜಗತ್ತಿನ ಎಲ್ಲ ದೇಶಗಳಿಗಿಂತ ಹೆಚ್ಚಿನದು. ನಿಜವಾಗಿ ಈ ವಿಚಾರ ಆಶ್ಚರ್ಯಕರ, ಅಲ್ಲವೆ? ಅಂದಮೇಲೆ ಪ್ರಪಂಚದ ಪರಿಸ್ಥಿತಿಯನ್ನು ಸರಿಪಡಿಸಿ ಕ್ರಮಗೊಳಿಸುವುದರಲ್ಲಿ ನಾವೂ ನಮಗೆ ತಕ್ಕಂತೆ ಪಾಲುಗೊಳ್ಳಬೇಕು ಎಂಬ ಹುರುಪು ಉಂಟಾಗದೇನು?" (ನಮ್ಮ ಹಿಂದೂಸ್ಥಾನ ಪು.೧)

ಪುಸ್ತಕದ ಈ ಮೊದಲ ವಾಕ್ಯಗಳು ನನಗೆ ಪುಸ್ತಕವನ್ನು ಕೊಂಡ ದಿನವೇ ಅದನ್ನು ಪೂರ್ತಿಯಾಗಿ ಓದಿ ಮುಗಿಸಲು ಹುರುಪು ನೀಡಿದವು. ವಿಧ್ಯಾರ್ಥಿ ನಿಲಯದ ಕೊಠಡಿಯಲ್ಲಿ ಸರಿರಾತ್ರಿಯ ಹೊತ್ತಿನಲ್ಲಿ ಚಿಮಣಿಯ ಮಿಣುಕು ಬೆಳಕಿನಲ್ಲಿ

'ಹಿಂದೂಸ್ಥಾನ್ ಹಮಾರಾ' ಎಂಬ ಕೊನೆಯ ಅಧ್ಯಾಯವನ್ನು ಓದುತ್ತಿದ್ದಾಗ, ನಿದ್ದೆಯಿಂದ ಎಚ್ಚರರಾದ ಪಕ್ಕದ ಹಿರಿಯ ವಿದ್ಯಾರ್ಥಿಯೊಬ್ಬ "ಏನು ಹೀಗೆ ಓದುತ್ತಿದ್ದೀಯೇ? ಯಾವ ಕಥೆ ಪುಸ್ತಕ ಅದು?" ಎಂದು ಕೇಳಿದ್ದು ನನಗೆ ನೆನಪಿಗೆ ಬರುತ್ತಿದೆ.

'ನಮ್ಮ ಹಿಂದೂಸ್ಥಾನ' ಓದಿ ಮುಗಿಸಿದ ಮೇಲೆ ವಿದ್ಯಾರ್ಥಿ ನಿಲಯದ ಪುಸ್ತಕ ಭಂಡಾರದಲ್ಲಿದ್ದ ಶರ್ಮ್ಮರ ಇನ್ನೂ ಒಂದೆರಡು ಪುಸ್ತಕಗಳನ್ನು ಹುಡುಕಿ ಓದಿದೆ. ಪುಟ್ಟ ಪುಟ್ಟ ವಾಕ್ಯಗಳ ಆ ಪರಿಣಾಮಕಾರಿ ಬರವಣಿಗೆ ಶರ್ಮ್ಮರ ಬಗ್ಗೆ ನನ್ನಲ್ಲಿ ಗೌರವವನ್ನು ಮೂಡಿಸಿತು. ಬರವಣಿಗೆಯ ಹುಮ್ಮಸ್ಸಿನಲ್ಲಿದ್ದ ನಾನು "ಬರೆದರೆ ಹೀಗೆ ಬರೆಯಬೇಕು" ಎಂದುಕೊಂಡೆ. ಅವರ ಶೈಲಿ ನನಗೆ ಒಂದು ಮಾದರಿಯನ್ನೊದಗಿಸಿತು. ಶರ್ಮ್ಮರೊಂದಿಗೆ ಸಂಪರ್ಕ ಬೆಳೆಸಬೇಕೆಂಬ ಕುತೂಹಲ ಮೂಡಿತು. ಬೆಂಗಳೂರು ಮಲೆನಾಡಿನ ಹಳ್ಳಿಗೆ ಬಹುದೂರ. ಪುಸ್ತಕ ಬರೆಯುವವರೊಬ್ಬರನ್ನು ನೋಡಲು ಅಷ್ಟು ದೂರ ಹೋಗುವುದು ಪ್ರೌಢಶಾಲೆಯ ಮೊದಲ ವರ್ಷದ ವಿದ್ಯಾರ್ಥಿಗೆ ಸಾಧ್ಯವಾಗದ ಮಾತು. ಉಳಿದ ದಾರಿ ಕಾಗದ ಬರೆಯುವುದೊಂದೇ. ಶರ್ಮ್ಮರಿಗೆ ದೀರ್ಘವಾದ ಕಾಗದ ಬರೆದೆ. ನನ್ನ ಸಾಹಿತ್ಯ ಉತ್ಸಾಹಗಳನ್ನೆಲ್ಲ ವಿವರಿಸಿ, ಅವರ ಬರವಣಿಗೆ ನನಗೆ ಮೆಚ್ಚುಗೆಯಾದುದನ್ನು ತಿಳಿಸಿದೆ; ಆಶೀರ್ವಾದ ಕೋರಿದೆ. ಏನು ಬರೆದೆನೆಂಬ ವಿವರಗಳು ನನಗೀಗ ನೆನಪಿಲ್ಲ. ಕಾಗದ ಭಾಗಶಃ ಬಾಲಿಶವಾಗಿದ್ದರೂ ಇರಬಹುದು. ಕಾಗದಕ್ಕೆ ಒಡನೆಯೇ ಉತ್ತರ ಬರಲಿಲ್ಲ. ನಾಲ್ಕಾರು ದಿನ ಅಂಚೆಯನ್ನು ನಿರೀಕ್ಷಿಸಿದ್ದಾಯಿತು. ಶರ್ಮ್ಮರಂಥ ಹಿರಿಯ ಸಾಹಿತಿಗಳಿಂದ ಉತ್ತರ ಪತ್ರ ಪಡೆಯುವಷ್ಟು ದೊಡ್ಡವನಾಗಿಲ್ಲ ಎಂದು ಸಮಾಧಾನ ತಂದುಕೊಂಡೆ. ಅನೇಕ ದಿನಗಳ ನಂತರ ಒಂದು ಪೋಸ್ಟ್‌ಕಾರ್ಡ್ ಬಂದು ನನಗೆ ಆಶ್ಚರ್ಯವನ್ನುಂಟುಮಾಡಿತು. ಅದು ಶರ್ಮ್ಮರ ಉತ್ತರ. ಚಿಕ್ಕ ಅಕ್ಷರಗಳ ಐದಾರು ಸಾಲುಗಳ ಪತ್ರ.

ತಮ್ಮ

೨೫-೭-೪೭

ನಿನ್ನ ಕಾಗದ ಬಂದು ಬಹುಕಾಲವಾಯಿತು. ಅಷ್ಟು ಅಭಿಮಾನದಿಂದ ಬರೆದಿದ್ದೀಯೆ. ಬಹಳ ಸಂತೋಷ. ನಿನ್ನ ಲೇಖನ ಕಾರ್ಯಕ್ಕೆ ನನ್ನ ಆಶೀರ್ವಾದವೆ? ಹಿರಿಯರೆಲ್ಲರ ಆಶೀರ್ವಾದವೂ ಇದೆ. ಧರ್ಮವಾಗಿ ನಾವು ನಮ್ಮ ಕೆಲಸ ಮಾಡಿದರೆ ಅದಕ್ಕೆ ಧರ್ಮ್ಮದ-ಹಿರಿಯರ ಆಶೀರ್ವಾದ ಇದ್ದೇ ಇದೆ.

ಹಾಗೇ ಬರೆಯುತ್ತಿರು, ನಾಳೆ ದೊಡ್ಡ ಬರಹಗಾರನಾಗು, ಮತ್ತೊಬ್ಬ ಪುಟ್ಟಪ್ಪನಾಗು.

ನಿನ್ನ,

ಸಿದ್ಧವನಹಳ್ಳಿ ಕೃಷ್ಣಶರ್ಮ

ಅರ್ಧ ಆಣೆಯ ಈ ಪೋಸ್ಟ್ ಕಾರ್ಡ್ ನನಗೆ ಎಂಥ ಅಪೂರ್ವ ಸಂತೋಷವನ್ನು ಹೆಮ್ಮೆಯನ್ನು ಉಂಟುಮಾಡಿತೆಂದು ಈಗಲೂ ನೆನಸಿಕೊಳ್ಳುತ್ತೇನೆ;

ಆ ಕಾರ್ಡ್‌ನ್ನು ಓದಿ ನನ್ನನ್ನು ಅಭಿಮಾನದಿಂದ ನೋಡಿದ ಗೆಳೆಯರು, ಪ್ರೀತಿಯಿಂದ ಬೆನ್ನು ತಟ್ಟಿದ ಅಧ್ಯಾಪಕರು ನೆನಪಿಗೆ ಬರುತ್ತಾರೆ.

ಶರ್ಮರೊಡನೆ ಮತ್ತೆ ನನ್ನ ಪತ್ರವ್ಯವಹಾರ ನಡೆಯಲಿಲ್ಲ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ನಾನು ಕನ್ನಡ ವಿಭಾಗದ ಮುಖ್ಯನಾದ ತರುಣದಲ್ಲಿ ತಮ್ಮ ಒಂದು ಪುಸ್ತಕದ ಪ್ರಕಟಣೆಯ ವಿಷಯದಲ್ಲಿ ಅವರು ಕಾಗದ ಬರೆದಿದ್ದರು, ಅಷ್ಟೆ.

ಕೃಷ್ಣಶರ್ಮರು ನುಡಿದಂತೆ ನಡೆಯುವವರು; ನಡೆ ನುಡಿಗಳ ನಡುವಿನ ಅಂತರವನ್ನು ತಿಳಿದವರಲ್ಲ. ತಮ್ಮ ನಂಬುಗೆ ನಿಶ್ಚಿತ ಧೋರಣೆಗಳನ್ನು ಅವರು ಎಂದೂ ಮುಚ್ಚಿಡಲಿಲ್ಲ. ಎದುರು ಪಕ್ಷದವರು ಎಷ್ಟು ದೊಡ್ಡವರೇ ಇರಲಿ ಅವರನ್ನು ಟೀಕಿಸಲು ಹಿಂದೆಗೆಯಲಿಲ್ಲ. ಕನ್ನಡದ ಕಣ್ವರೆಂದು ಕೀರ್ತಿತರಾದ ಆಚಾರ್ಯ ಬಿ.ಎಂ. ಶ್ರೀಕಂಠಯ್ಯನವರು ತಮ್ಮ ಮನೆಯ ಎದುರು ಇಂಗ್ಲಿಷಿನಲ್ಲಿ ಹೆಸರು ಹಲಗೆ ತಗುಲಿಸಿಕೊಂಡಿದ್ದನ್ನು ಕೃಷ್ಣಶರ್ಮರು ಸಹಿಸಲಿಲ್ಲ. ಅದನ್ನು ಟೀಕಿಸಿ ಬರೆದರು. "ಕನ್ನಡೇತರ ಮಿತ್ರರಿಗಾಗಿ ಈ ಬೋರ್ಡು" ಎಂದರಂತೆ, ಸಮಜಾಯಿಷಿ ಕೊಡುತ್ತಾ ಇಂಗ್ಲಿಷ್ ಪ್ರೋಫೆಸರ್. ಶರ್ಮರು ಅಷ್ಟಕ್ಕೆ ಬಿಡಲಿಲ್ಲ. "ಹಾಗಾದರೆ ಕನ್ನಡ ಇಂಗ್ಲಿಷ್ ಎರಡರಲ್ಲೂ ಬರೆಸಿ" ಎಂದರು. ಕೊನೆಗೆ ಶ್ರೀಕಂಠಯ್ಯನವರು ಆ ಹೆಸರು ಹಲಗೆಯನ್ನೇ ತೆಗೆಸಿ ಹಾಕಿದರಂತೆ (ಪು.೧೪೬) ಕೈಲಾಸಂ ನಾಟಕ "ಟೊಳ್ಳುಗಟ್ಟಿ" ಯನ್ನು ಕುರಿತು "ಪ್ರಬುದ್ಧ ಕರ್ನಾಟಕ"ದಲ್ಲಿ ಕೃಷ್ಣಸಾಸ್ತ್ರಿಗಳು ಬರೆದ ವಿಮರ್ಶೆ ಅದಕ್ಕೆ ಕೃಷ್ಣಶರ್ಮರ ಉತ್ತರದ ಪ್ರಸಂಗ(ಪು.೧೫೪)ಇಂಥಧೇ ಇನ್ನೊಂದು ಸಂದರ್ಭ. ಶ್ರೀಕಂಠಯ್ಯ ಹಾಗೂ ಕೃಷ್ಣಶಾಸ್ತ್ರಿ ಅವರ ಹಿರಿಮೆಯನ್ನೂ ಎತ್ತಿ ಹಿಡಿಯುವ ಈ ಪ್ರಸಂಗಗಳಲ್ಲಿ ಕೃಷ್ಣಶರ್ಮರ ಸತ್ಯನಿಷ್ಠುರತೆಯ ವ್ಯಕ್ತಿತ್ವವೂ ಶೋಭಿಸಿದೆ.

ಕೃಷ್ಣಶರ್ಮರು ಸಲ್ಲಿಸಿದ ಸೇವೆಯೆಲ್ಲ ರಾಷ್ಟ್ರಕ್ಕಾಗಿ, ನಾಡಿಗಾಗಿ, ನುಡಿಗಾಗಿ, ನಮ್ಮಜನತೆಯ ಕಲ್ಯಾಣಕ್ಕಾಗಿ. ಸೇವೆಯಲ್ಲಿ ಅವರೆಂದೂ ಸ್ವಾರ್ಥವನ್ನು ಬೆರಸಿದವರಲ್ಲ. ಸ್ವಾತಂತ್ರ್ಯ ಪೂರ್ವದ ದಿನಗಳ ಕೆಲಸಗಾರರಲ್ಲಿ ಅನೇಕರು ಸ್ವಾತಂತ್ರ್ಯೋತ್ತರ ದಿನಗಳಲ್ಲಿ ಹೇಗೆ ತಮ್ಮ ವೇಷ ಬದಲಾಯಿಸಿದರೆಂಬುದು ನಮಗೆಲ್ಲ ತಿಳಿದ ವಿಚಾರವಾಗಿದೆ. ಮೌಲ್ಯಗಳ ಅಧಃಪತನವನ್ನು ಇದು ಸಾರಿ ಸಾರಿ ಹೇಳಿದರೂ, ಮನುಷ್ಯನ ಸ್ವಾರ್ಥಲಾಲಸೆಯೇ ಮೇಲಾಯಿತು. ನಮ್ಮ ರಾಷ್ಟ್ರಜೀವನದ ಒಂದು ವಿಷಾದಾಂತ ಅಧ್ಯಾಯವನ್ನು ಹೀಗೆ ಸೇವೆಯ ಹೆಸರಿನಲ್ಲಿ ನಿರ್ಮಿಸಲಾಯಿತು. ಆದರೆ ಕೃಷ್ಣಶರ್ಮರು ಇದಕ್ಕೆ ಸ್ವಲ್ಪವೂ ಪಾಲುದಾರರಲ್ಲ. ಅವರು ಶುದ್ಧ ಸೇವೆಯನ್ನು ನಂಬಿ ನಡೆದವರು; ಎಲ್ಲ ಆಮಿಷಗಳಿಂದಲೂ ಹೊರಗೆ ಉಳಿದವರು. ಇಲ್ಲದಿದ್ದರೆ ಸ್ವಾತಂತ್ರ್ಯೋತ್ತರ ದಿನಗಳಲ್ಲಿ ಅವರಿಗೆ ಯಾವುದಾದರೊಂದು ಹುದ್ದೆಯನ್ನು ದಕ್ಕಿಸಿಕೊಳ್ಳುವುದು ಕಷ್ಟವಾಗುತ್ತಿರಲಿಲ್ಲ.

ಶರ್ಮರ ಜೊತೆಯ ಕಾರ್ಯಕರ್ತರಾದ ಬುರುಗಲು ರಾಮಕೃಷ್ಣರಾಯರು ಮುಂದೆ ಮುಖ್ಯಮಂತ್ರಿ ಆದರು; ರಾಜ್ಯಪಾಲರಾದರು. ಯಾವುದಾದರೊಂದು ಹುದ್ದೆಯನ್ನು ಸ್ವೀಕರಿಸುವಂತೆ ಅವರು ಶರ್ಮರಿಗೆ ಪದೇ ಪದೇ ಆಹ್ವಾನಿಸುತ್ತಿದ್ದರಂತೆ.

ಒಮ್ಮೆ ವಾರ್ತಾ ಇಲಾಖೆಯ ನಿರ್ದೇಶಕರಾಗುವಂತೆ, ಮತ್ತೊಮ್ಮೆ ಶಿಕ್ಷಣ ಸಲಹೆಗಾರರಾಗಿರುವಂತೆ ಮಗದೊಮ್ಮೆ ಹೈದ್ರಾಬಾದಿನಿಂದ ರಾಜ್ಯಸಭೆಯ ಸದಸ್ಯರಾಗಿ ಹೋಗುವಂತೆ, ಮತ್ತೂ ಒಮ್ಮೆ ಕೇರಳದ ರಾಜ್ಯಪಾಲರ ಆಪ್ತ ಕಾರ್ಯದರ್ಶಿಯಾಗಿರುವಂತೆ. ಹೀಗೆ ಅವಕಾಶಗಳ ಆಕರ್ಷಣೆ ಒಂದೆರಡಲ್ಲ. ಎಲ್ಲಕ್ಕೂ ಶರ್ಮರು ತಲೆಯಾಡಿಸಿ ಒಲ್ಲೆ ಎಂದರು. ಜೊತೆಗೆ ಹೇಳಿದರಂತೆ. "ಅಪ್ಪಾ, ನಿನ್ನ ಮನೆಗೆ ಬಂದಾಗ ಒಳ್ಳೆ ಊಟ ಹಾಕು, ಸಾಕು ಅಷ್ಟೆ." (ಪು,೯೪). ಹೈದರಾಬಾದಿನ ಶ್ರೀಮಂತನೊಬ್ಬ ದೊಡ್ಡ ಇಂಗ್ಲಿಷ್ ಪತ್ರಿಕೆಯೊಂದನ್ನು ಪ್ರಕಟಿಸುವ ಸನ್ನಾಹದಲ್ಲಿದ್ದ. ಅವನು ಶರ್ಮರನ್ನು ಅದಕ್ಕೆ ಸಂಪಾದಕರಾಗಿರುವಂತೆ ಕೋರಿದ. ಸಾವಿರ ರೂಪಾಯಿ ಸಂಬಳ; ಉಚಿತ ಬಂಗಲೆ, ಕಾರು. ಶರ್ಮರು ಅದನ್ನೂ ಒಪ್ಪಲಿಲ್ಲ. ಹೈದರಾಬಾದಿನಲ್ಲಿನ ತಮ್ಮ ಕೆಲಸ ಮುಗಿಯಿತು ಎಂದು ಅವರು ತೀರ್ಮಾನಿಸಿಬಿಟ್ಟಿದ್ದರು (ಪು, ೯೫). ನೆನ್ನೆ ಮೊನ್ನೆ ನಮ್ಮೊಂದಿಗೆ ಇಂಥ ವ್ಯಕ್ತಿಯೊಬ್ಬ ಬದುಕಿದ್ದರೆಂಬುದನ್ನು ನಂಬುವುದೇ ಕಷ್ಟವಾಗಿದೆ, ಈಗ. ಒಂದು ಹುದ್ದೆಗೆ ಏನೆಲ್ಲ ಸ್ಪರ್ಧೆ, ಎಷ್ಟೊಂದು ಮಸಲತ್ತು, ಮಾತ್ಸರ್ಯ! ರಾಷ್ಟ್ರಸೇವೆಯ ಮಾರಾಟ ಬಹುಸುಲಭವಾಗಿ ನಡೆಯುತ್ತಿರುವ ಈ ದಿನಗಳಲ್ಲಿ ಅದಕ್ಕೆ ಕಳ್ಳಸಂತೆಯ ಬೇಡಿಕೆಯೂ ಉಂಟು. ಈ ಹಿನ್ನೆಲೆಗಳಲ್ಲಿ ಕೃಷ್ಣಶರ್ಮರು ಎತ್ತರದ ವ್ಯಕ್ತಿಯಾಗಿ ನಿಂತಿದ್ದಾರೆ.

ಕೃಷ್ಣಶರ್ಮರು ತಾವು ಪಾಲುಗೊಂಡ ಕೆಲಸಗಳಿಗೆಲ್ಲ ಎಂಥ ಶುಭ್ರತೆಯನ್ನೂ ಪಾವಿತ್ರ್ಯವನ್ನು ತರುತ್ತಿದ್ದರೆಂಬುದಕ್ಕೆ ಅವರು ಸದಸ್ಯರಾಗಿದ್ದ ಆಯ್ಕೆ ಸಮಿತಿಯೊಂದರ ಕಾರ್ಯಕಲಾಪಗಳ ವರದಿ ಇಲ್ಲಿ ಉಲ್ಲೇಖಿತವಾಗಿದೆ.(ಪು,೨೦೦-೨೦೧). ಆಯ್ಕೆ ಸಮಿತಿಯ ಸದಸ್ಯರಿಗೆ ಕೆಲವು ಸ್ಥಾನಗಳು ಮೀಸಲಾಗಿದ್ದವು. ಇಂಜಿನಿಯರಿಂಗ್ ಕಾಲೇಜು ಸೀಟುಗಳಿಗಾಗಿ ರಾಮಾಯಣ, ಮಹಾಭಾರತಗಳು ನಡೆಯುತ್ತಿದ್ದ ದಿನಗಳವು. ಸಮಿತಿಯ ಸದಸ್ಯರು ತಮ್ಮ ಪಾಲಿನ ಸ್ಥಾನಗಳನ್ನು ಬೇಕಾದ ಹಾಗೆ ವಿಲೇವಾರಿ ಮಾಡಿಕೊಳ್ಳಬಹುದಾಗಿತ್ತು. ಶರ್ಮರು ಅದಕ್ಕೆ ಅವಕಾಶಕೊಡಲಿಲ್ಲ. ಆ ಜಾಗಗಳೂ ವಿದ್ಯಾರ್ಥಿಯ ಪ್ರತಿಭೆಗನುಗುಣವಾಗಿಯೇ ಹಂಚಿಕೆಯಾಗಬೇಕೆಂದು ಹಠ ಹಿಡಿದರು, ಗೆದ್ದರು. ಆಯ್ಕೆ ಪ್ರಕಟವಾದ ಮರುದಿನವೇ ಅವರು ಸಮಿತಿಯಿಂದ ಹೊರಬಂದರು!

ಇಂಥ ಪ್ರಸಂಗಗಳ ಪಟ್ಟಿಯನ್ನು ಇನ್ನೂ ಬೆಳೆಸಬಹುದು; ಆದರೆ ಅಗತ್ಯವಿಲ್ಲ. ಏಕೆಂದರೆ ಶರ್ಮರ ಬದುಕು ಪೂರ್ಣವಾಗಿ ಇಂಥ ಪ್ರಸಂಗಗಳಿಂದಲೇ ತುಂಬಿದ್ದು ಶ್ರೀ ಕಸ್ತೂರಿಯವರು ಉಚಿತವಾಗಿಯೇ ಅವನ್ನೆಲ್ಲ ಇಲ್ಲಿ ಸ್ವಾರಸ್ಯವಾಗಿ ನಿರೂಪಿಸಿದ್ದಾರೆ.ಇದರಿಂದ ಈ ಜೀವನ ಚರಿತ್ರೆಗೆ ಒಂದು ಸಮಗ್ರತೆಯೂ ಅಧಿಕೃತತೆಯೂ ಲಭ್ಯವಾಗಿವೆ.

ಕೃಷ್ಣಶರ್ಮರು ಆಧುನಿಕ ಕನ್ನಡದ ಗದ್ಯದ ಆಚಾರ್ಯರಲ್ಲಿ ಒಬ್ಬರಾಗಿದ್ದಾರೆ. ಅವರು ತಮ್ಮ ಗದ್ಯದ ಗತ್ತಿನಲ್ಲಿಯೇ ಕಾವ್ಯದ ಬಳಕು ಸೊಗಸುಗಳನ್ನೆಲ್ಲ ತೋರಿಸಿದ್ದಾರೆ. ಕೀರ್ತನಾಥಕುರ್ತಕೋಟಿಯವರು ಹೇಳಿದಂತೆ "ವಕ್ರೋಕ್ತಿ, ವಿರೋಧಾಭಾಸ, ವ್ಯಾಜಸ್ತುತಿ ಮುಂತಾದ ಅಲಂಕಾರಗಳನ್ನು ಅವರು ಗದ್ಯದಲ್ಲಿ

ಉಪಯೋಗಿಸಿದ್ದಾರೆ."(ಮಾತಿನ ಮಂಟಪ-೨) ತಮ್ಮ ಗದ್ಯ ಹೇಗೆ ಪದ್ಯದ ಕೆಲಸವನ್ನೂ ಮಾಡಿತು ಎಂದು ಶರ್ಮರೇ ಒಂದು ಸಂದರ್ಭವನ್ನು ವಿವರಿಸಿದ್ದಾರೆ. ೧೯೩೪ ರಲ್ಲಿ ರಾಯಚೂರಿನಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಕವಿಗೋಷ್ಠಿಗೆ ಸಂಭಂದಿಸಿದ್ದು ಈ ಪ್ರಸಂಗ.

"ಕವಿಗೋಷ್ಠಿಯಲ್ಲಿ ಕವನಗಳನ್ನು ಓದುವುದು ವಾಡಿಕೆ. ಅದರಂತೆ ರಸಿಕರಂಗರು ಒಂದು ಕವನವನ್ನು ಓದಿದರು. ಅವರ ಹಾಡಿನ ಧಾಟಿ ಶ್ರುತಿಜ್ಞಾನ ಹೇಳುವ ರೀತಿ ಎಲ್ಲವೂ ಚೆನ್ನು. ಶ್ರೋತೃಗಳು ಆನಂದದಲ್ಲಿ ಮುಳುಗಿದರು. ಅದು ಮುಗಿದ ಕೂಡಲೆ ಕವಿಗೋಷ್ಠಿಯ ಅಧ್ಯಕ್ಷರು ನನ್ನ ಹೆಸರನ್ನು ಕೂಗಿದರು. ನಾನು ಹೇಳಿ ಕೇಳಿ ಗದ್ಯ ಓದಿದವನು. ಮೇಲಾಗಿ ರಸಿಕರಂಗರದು ಆದ ಮೇಲೆ ದೊಡ್ಡ ಪರೀಕ್ಷೆ.

'ಕನ್ನಡ ಕಿಡಿ' ಗಳಲ್ಲಿನ ಬೇಂದ್ರೆಯವರ ವ್ಯಕ್ತಿಚಿತ್ರವನ್ನೇ ಆರಿಸಿಕೊಂಡೆ. ಸಮ್ಮೇಳನಾಧ್ಯಕ್ಷರೂ ಕುರ್ಚಿಯಲ್ಲಿ ಕೂತಿದ್ದರು.ಆ ವ್ಯಕ್ತಿ ಚಿತ್ರದ ಹಾಂಗೊಮ್ಮೆ ಹೀಂಗೊಮ್ಮೆ ತಕಧಿಮಿ ತಕಧಿಮಿ ಎಂದು ಓದಿದಾಗ ಕವನದಷ್ಟೇ ಆನಂದ ಹೆಚ್ಚಿತು ಕೂತಿದ್ದವರಿಗೆ. ಪಂಜೆಮಂಗೇಶರಾಯರು ಭಲೆ ಭಲೆ ಎಂದರು".(ಸಿದ್ಧಹಸ್ತ ಪು.೫೯)

ಕೃಷ್ಣಶರ್ಮರ ಗರಡಿಯಲ್ಲಿ ತಯಾರಾದ ಅನೇಕ ಲೇಖಕರು ಪತ್ರಿಕೋದ್ಯಮಿಗಳು ಅವರ ಬರವಣಿಗೆಯನ್ನು ಅನುಕರಿಸಿರುವುದನ್ನು ಸುಲಭವಾಗಿ ಗುರುತಿಸಬಹುದು. ಆದರೆ ಶರ್ಮರ ಬರವಣಿಗೆಯ ಪರಿಣಾಮ ರಮಣೀಯತೆಯನ್ನು ಸಾಧಿಸಿದವರು ಮಾತ್ರ ಒಬ್ಬರೂ ಇಲ್ಲ. ಆ ಸರಳ ಶೈಲಿ ನೋಡಲು ಸುಲಭವಾದದ್ದು; ಅಳವಡಿಸಲು ಅಸಾಧ್ಯವಾದುದ್ದು.

'ಕನ್ನಡ ಕಿಡಿಗಳು' ಎನ್ನುವುದು ಕೃಷ್ಣಶರ್ಮರ ಒಂದು ಪುಸ್ತಕದ ಹೆಸರು. ಆದರೆ ಶರ್ಮರೇ ಒಂದು ಕನ್ನಡದ ಕಿಡಿ ಎನ್ನುವುದನ್ನು ನಾವು ಮರೆಯುವಂತಿಲ್ಲ. ನಮ್ಮ ಭಾಷೆಗಳ ಸ್ಥಾನಮಾನದ ಬಗೆಗೆ ಅವರಷ್ಟು ನಿರ್ವಿಕಾರ ಮನಸ್ಸಿನಿಂದ ಸುಸ್ಪಷ್ಟವಾಗಿ ಆಲೋಚಿಸಿದವರು ವಿರಳ. ಸಾವಿರಾರುವರ್ಷಗಳ ದೀರ್ಘ ಇತಿಹಾಸಗಳನ್ನುಳ್ಳ ನಮ್ಮ ರಾಷ್ಟ್ರಭಾಷೆಗಳನ್ನೆಲ್ಲ ಅವುಗಳ ರಾಜ್ಯದಲ್ಲಿ ಪ್ರಥಮವೂ, ಪ್ರಧಾನವೂ ಆದ ಭಾಷೆಗಳನ್ನಾಗಿ ಸ್ಥಾಪಿಸಿದರೆ ಸಮಸ್ಯೆ ಮುಗಿದೆ ಹೋಗುತ್ತದೆ. ತಮ್ಮ ಭಾಷೆಗಳ ಸ್ಥಾನ ಗಟ್ಟಿಯಾದ ಮೇಲೆ ಎಲ್ಲ ಜನರು ಒಂದು ಸಂಪರ್ಕಭಾಷೆಗೆ ತಾನಾಗಿಯೇ ಒಪ್ಪುತ್ತಾರೆ. ಈ ಸಂಪರ್ಕ ಭಾಷೆ ಯಾವುದಿರಬೇಕು ಎಂದು ಗೊತ್ತುಮಾಡುವಾಗ ಸಹಜವಾಗಿಯೇ ಜನ ನಮ್ಮದೇ ಭಾಷೆಯನ್ನು ಆಯ್ದುಕೊಳ್ಳುತ್ತಾರೆ,ಅಂತ ಭಾಷೆ ನಮ್ಮ ಮೈಗೂಡುವುದೂ ಸುಲಭ. ಆದರೆ ಈಗ ಸಮಸ್ಯೆ ಏನಾಗಿದೆ ಎಂದರೆ ಎಲ್ಲ ರಾಷ್ಟ್ರಭಾಷೆಗಳ ಸ್ಥಾನದಲ್ಲೂ ಒಂದೇ ರಾಷ್ಟ್ರಭಾಷೆ ಭದ್ರವಾಗಿ ಬೇರೂರಲು ವ್ಯವಸ್ಥೆಗಳಾಗುತ್ತಿವೆ. ರಾಷ್ಟ್ರದ ಪರಿಸ್ಥಿತಿ ಅನುಕೂಲಕರವಾದ ಗೊಬ್ಬರ ನೀರುಗಳನ್ನು ಹಾಕುತ್ತಿದೆ. 'ಕನ್ನಡ ಸಮಸ್ಯೆ' ಎಂಬ ತಮ್ಮ ಕಿರು ಪುಸ್ತಕದಲ್ಲಿ ಶರ್ಮರು ಇದನ್ನೆಲ್ಲ ಬಗೆಬಗೆಯಾಗಿ ಪರಿಶೀಲಿಸಿದ್ದಾರೆ.

ಅವರ ಕೆಲವು ಮಾತುಗಳು ನಾವು ಸದಾ ನೆನಪಿನಲ್ಲಿಟ್ಟುಕೊಳ್ಳಬೇಕಾದಂಥವು; ಮಂತ್ರಸದೃಶವಾದವು.

"ನಮ್ಮ ಹಿಂದಿ ಪ್ರಚಾರಕರೂ ಸಂಸ್ಕೃತಪಂಡಿತರೂ ಮೂಲತಃ ಕನ್ನಡಿಗರು ಅವರ ಮನೆಮಾತು ಏನೇ ಇರಲಿ, ಕನ್ನಡಿಗರು. ಅವರ ಮೊದಲ ಕರ್ತವ್ಯ ಕನ್ನಡಕ್ಕೆ. ಸರಿಯಾದ ಸ್ಥಾನಸಿಗಲೆಂದು ಹೋರಾಡುವುದು. ಕನ್ನಡದ ಗಾಲಿ ಹೂತು ಹೋಗಿರುವಾಗ ಬೇರೆ ಕೆಲಸವುಂಟೆ? ಎಲ್ಲರೂ ಓಡಿಬಂದು ಹೆಗಲುಕೊಡಬೇಕು. ಕನ್ನಡ ಪ್ರೀತಿಯಿಲ್ಲದ ಹಿಂದಿ ವ್ಯಾಮೋಹವೂ ದೇಶದ್ರೋಹವೇ"(ಪು,೨೬)

"ರಾಷ್ಟ್ರಭಾಷೆ, ರಾಷ್ಟ್ರಭಾಷೆ ಎಂದು ಹಿಂದಿ ನುಡಿಯಲ್ಲಿ ಭರತಮಾತೆಯ ಅವತಾರವನ್ನು ನಾವು ಕಾಣಬೇಕಾಗಿಲ್ಲ. ಕನ್ನಡದಲ್ಲೂ ಭರತಮಾತೆ ಇದಾಳೆ. ರಾಷ್ಟ್ರಭಾಷೆ ಎಂಬ ಪದ ಸಲ್ಲದ ಭಾವನೆ ಭಕ್ತಿಗಳಿಗೆ ಬೀಜವಾಗಬಾರದು". (ಪು,೨೬)

"ಹಿಂದಿ ಇನ್ನುಮುಂದೆ ನಮ್ಮನ್ನು ನುಂಗಲು ಬರಬಹುದಾದ ರಾಹು. ಸಂಸ್ಕೃತಕ್ಕೆ ಆ ಯೋಗ್ಯತೆಯೂ ಇಲ್ಲ. ಆದರೆ ಇಂದೇ ನಮ್ಮನ್ನು ನುಂಗಿ ನೀರು ಕುಡಿಯುವ ಕೇತು ಇನ್ನೊಂದಿದೆ. ಅದು ಇಂಗ್ಲಿಷು....ಹಿಂದಿ ನಮ್ಮ ಬೆರಳು ಹಿಡಿದು ಹಸ್ತವನ್ನೇ ನುಂಗುವಂತಾಗಬಾರದೆಂಬುದು ಚಾಣಾಕ್ಷತನ, ದೂರದೃಷ್ಟಿ." (ಪು,೨೪)

"ನಮ್ಮ ಶಿಕ್ಷಣ ಪದ್ಧತಿಯ ಕಂಸಾಸುರ ಈ ಇಂಗ್ಲಿಷು, ಈ ಮಾತು ಇಂಗ್ಲಿಷಿನ ಮೇಲಿನ ಹಗೆಯಿಂದ ಹೇಳಿದುದಲ್ಲ; ನಮ್ಮ ಮಕ್ಕಳ ಮೇಲಿನ ಪ್ರೀತಿಯಿಂದ ಹೇಳಿದುದು." (ಪು,೩೩)

"ಸಂಸ್ಕೃತವಲ್ಲದ್ದು ಮಂತ್ರವಲ್ಲ, ಕನ್ನಡದಲ್ಲಿ ಹೇಳಿದ್ದು ಸ್ತೋತ್ರವಲ್ಲ ಎಂಬುದೊಂದು ಕಾಲ ನಮ್ಮ ದೇಶದಲ್ಲಿತ್ತು. ಈಗಲೂ ಹಾಗೆಯೇ ಇದೆ ನಮ್ಮ ದುರವಸ್ಥೆ. ಹಿಂದಿ ಬಾರದವನು ರಾಜಕಾರಣಪಟುವಲ್ಲ; ಇಂಗ್ಲಿಷ್ ಬಾರದವನು ವಿದ್ವಾಂಸನಲ್ಲ; ಇಂಗ್ಲಿಷ್ ಇಲ್ಲದೆ ವಿಜ್ಞಾನವಿಲ್ಲ; ಕನ್ನಡ ಕಲಿತರೆ ಸಂಬಳವಿಲ್ಲ ಎನ್ನುತ್ತೇವೆ. (ಪು,೪೬)

ಸುಮಾರು ಮೂವತ್ತು ವರ್ಷಗಳ ಹಿಂದಿನ ಈ ಮಾತುಗಳಿಗೆ ಈಗಲೂ ಯಾವೊಂದು ತಿದ್ದುಪಡಿಯ ಅಗತ್ಯವಿಲ್ಲ. ಸ್ವಾತಂತ್ರ್ಯ ಪಡೆದು ೫ದಶಕಗಳಾದ ರಾಷ್ಟ್ರದ ಹಣೆಬರಹ ಇದು! ಕೃಷ್ಣಶರ್ಮರಂಥ ಹಿರಿಯರ, ತಜ್ಞರ, ಅನುಭವಿಗಳ ಮಾತಿಗೆ ಕಿವಿಗೊಡದ ರಾಷ್ಟ್ರಕ್ಕೆ ಯಾವ ಭವಿಷ್ಯ ಕಾದಿದೆಯೋ ನಾ ಕಾಣೆ. ಅವರಂಥ ತುಂಬು ಜೀವನಗಳನ್ನು ಕಡೆಗಾಣಿಸಿರುವುದರ ಫಲವನ್ನು ಈಗ ನಾವು ಧಾರಾಳವಾಗಿ ಅನುಭವಿಸುತ್ತಿದ್ದೇವೆಂಬುದು ನಿಜ.

(ಸಾಭಾರ:– *ನೀಲತ್ತಹಳ್ಳಿ ಕಸ್ತೂರಿಯವರ "ಸಿದ್ಧವನಹಳ್ಳಿ ಕೃಷ್ಣಶರ್ಮರ ಜೀವನ ಚರಿತ್ರೆ" ಪುಸ್ತಕದ ಮುನ್ನುಡಿಯಿಂದ.*)

***

ನಿಸರ್ಗೋಪಚಾರ: ಇಂದು ಅವಶ್ಯ, ನಾಳೆ ಅನಿವಾರ್ಯ!

–ಡಾ॥ ಜೆ.ವಿ. ಕುಲಕರ್ಣಿ

ಪ್ರಕೃತಿ ಚಿಕಿತ್ಸೆಯ ವಿಧಾನ ಇದು ಹೊಸತಲ್ಲ. ನೇಚರೋಪಥಿ ಅರ್ಥಾತ್ 'ನಿಸರ್ಗೋಪಚಾರ' ಎಂಬ ಪದ ಇತ್ತೀಚಿನದಾದರೂ 'ನಿಸರ್ಗ' ರೋಗವನ್ನು ನಿವಾರಿಸುತ್ತದೆ ಎಂಬ ತತ್ವ ಪೂರ್ವಜರಿಗೆ ತಿಳಿದಿತ್ತು. ಈಜಿಪ್ಟ್, ಗ್ರೀಸ್ ಹಾಗೂ ರೋಮ್‌ಗಳಲ್ಲಿ ಇದನ್ನು ಅನುಸರಿಸಲಾಗುತ್ತಿತ್ತು. ವೈದ್ಯ ಶಾಸ್ತ್ರದ ಜನಕನೆಂದು ಪ್ರಸಿದ್ಧನಾದ ಗ್ರೀಕ್ ವೈದ್ಯ ಹಿಪೊಕ್ರೇಟಸ್ (ಕ್ರಿಪೂ. ೪೬೦-೩೫೭) ಹೇಳಿದ್ದ 'ಪ್ರಕೃತಿ ಗುಣಪಡಿಸುತ್ತದೆ, ವೈದ್ಯನಲ್ಲ' ಎಂದು. ಈ ಮಾತು ನಿಸರ್ಗೋಪಚಾರದ ಸೂತ್ರ ವಾಕ್ಯದಂತಿದೆ. ನೀರು, ಗಾಳಿ, ಮಣ್ಣು, ಬಿಸಿಲು ಇವುಗಳಲ್ಲಿ ರೋಗ ನಿವಾರಕ ಶಕ್ತಿಯಿರುವುದರ ಬಗ್ಗೆ ಭಾರತೀಯ ಪವಿತ್ರ ಗ್ರಂಥಗಳಲ್ಲಿ ಉಲ್ಲೇಖ ದೊರೆಯುತ್ತದೆ. ಈ ದಿಶೆಯಲ್ಲಿ ಸಂಶೋಧನೆ ಮಾಡಬೇಕು. ವೈದಿಕರು ಮೃತಿಕಾ ಸ್ನಾನದ ಬಗ್ಗೆ ಬರೆಯುತ್ತಾರೆ.ಅದು ಕೇವಲ ತಾಂತ್ರಿಕವಾಗಿ ಉಳಿದಿದೆ. ಅದರಲ್ಲಿ ನಾವು 'ಮಡ್-ಭಾಥ್'ನ ಮೂಲವನ್ನು ಹುಡುಕಬಹುದು. ಮೊಹೆಂಜೋದಾರದ ಅವಶೇಷಗಳಲ್ಲಿ, ಅಷ್ಟು ದೂರ ಏಕೆ ವಿಜಯನಗರದ ಅರಮನೆಗಳಲ್ಲಿ ಸ್ನಾನಗೃಹಗಳನ್ನು ನೋಡಿದರೆ ಸ್ನಾನವನ್ನು ಆರೋಗ್ಯದ ದೃಷ್ಟಿಯಿಂದ ಹೇಗೆ ಬಳಸುತ್ತಿದ್ದರು ಎಂಬ ಕಲ್ಪನೆ ಬರುತ್ತದೆ.

ವಿಠಲದಾಸ ಮೋದಿಯವರು ನಿಸರ್ಗೋಪಚಾರದ ಉಗಮ ಬೆಳವಣಿಗೆಯ ಬಗ್ಗೆ ಬರೆಯುತ್ತಾರೆ. ಆಧುನಿಕ ಕಾಲದಲ್ಲಿ ಪ್ರಕೃತಿ ಚಿಕಿತ್ಸೆಯ ಆಂದೋಲನವನ್ನು ಜರ್ಮನಿಯ ವಿನ್‌ಸೆಜ್ ಪ್ರೆಸ್‌ನಿಜ್ ಎಂಬುವನು ೧೮೨೨ರಲ್ಲಿ ಪ್ರಾರಂಭಿಸಿದ. ಇವನು ಗ್ರೆಫೆನ್‌ಬರ್ಗ್‌ನಲ್ಲಿ ಪ್ರಥಮ ನಿಸರ್ಗ ಚಿಕಿತ್ಸಾ ಕೇಂದ್ರವನ್ನು(೧೮೨೬) ತೆರೆದ. ಇವನಲ್ಲಿ ಸೂಕ್ಷ್ಮ ದೃಷ್ಟಿ, ಅಂತರ್ ದೃಷ್ಟಿ ಇತ್ತು. ಇವನು ಮೊದಲು ತಾನೇ ಅಸ್ವಸ್ಥನಾದಾಗ, ಸ್ವಂತ ಪ್ರಯತ್ನದಿಂದ, ನಿಸರ್ಗದ ನಿಯಮಗಳನ್ನು ಪಾಲಿಸಿ ತನ್ನ ಸ್ವಾಸ್ಥ್ಯವನ್ನು ಮರಳಿ ಪಡೆದ. ತಣ್ಣೀರನ್ನು ಬಳಸಿ ರೋಗ ನಿವಾರಿಸುವ ಕಲೆಯನ್ನು ಇವನು ಕಂಡು ಹಿಡಿದಿದ್ದ. ಜಲಚಿಕಿತ್ಸೆಯಲ್ಲಿ ಇವನಿಗೆ ಅಪಾರ ವಿಶ್ವಾಸವಿತ್ತು. ಇವನು ಅನೇಕ ರೋಗಗಳನ್ನು ಗುಣಪಡಿಸಿದನು. ಆಶ್ಚರ್ಯಕರ ಯಶಸ್ಸು ಇವನಿಗೆ ಲಭಿಸಿತು. ಇವನ ಸಫಲತೆ ಕಂಡು ಹಳೆಯ ಪದ್ಧತಿಯ ಡಾಕ್ಟರೆಲ್ಲ ಇವನ ವಿರೋಧಿಗಳಾದರು. ಇವನನ್ನು ನಿಂದಿಸಿದರು. ಅಪಹಾಸ್ಯ

ಮಾಡಿದರು. ದಾವೆಹೂಡಿ ಕೋರ್ಟಿಗೆಳೆದರು. ಆದರೆ ಇವನ ಚಿಕಿತ್ಸೆ ಪರಿಣಾಮಕಾರಿಯಾಗಿದ್ದರಿಂದ ವಿಜಯ ಇವನದಾಯಿತು. ಇವನು ತನ್ನ ಸಂಸ್ಥೆಯ ಎದುರು ಒಂದು ವಾಕ್ಯ ಕೆತ್ತಿಸಿದ್ದನಂತೆ. "ನೀವು ಧೈರ್ಯದಿಂದ ಇರಬೇಕಾಗುವುದು" ಎಂದು. ಈ ಚಿಕಿತ್ಸೆಗೆ ಸ್ವಲ್ಪ ವಿಳಂಬವಾದೀತು. ಆದ್ದರಿಂದ ಯಾರೂ ಧೈರ್ಯ ಕಳೆದುಕೊಳ್ಳ ಬಾರದು ಎಂಬುದು ಈ ವಾಕ್ಯದ ಒಳ ಅರ್ಥವಾಗಿತ್ತು.

ನಿಸರ್ಗ ಚಿಕಿತ್ಸೆಯ ಕ್ಷೇತ್ರದಲ್ಲಿ ಎರಡನೆಯ ಹೆಸರು ಜೋಹಾನ್ಸ್ ಸ್ಕ್ರೋಥ್ ಎಂಬವನದ್ದು. ಇವನು ಆಸ್ಟ್ರಿಯನ್ ಆಗಿದ್ದ. ಇವನು ಕೂಡಾ ಸ್ವಾನುಭವದಿಂದಲೇ ಪ್ರಕೃತಿ ಚಿಕಿತ್ಸೆಯಲ್ಲಿ ಪರಿಣತಿಯನ್ನು ಪಡೆದ. ಮೊದಲು ಇವನು ಪ್ರಾಣಿಗಳ ಚಿಕಿತ್ಸೆಮಾಡುತ್ತಿದ್ದ ಗಾಯಗೊಂಡ ನಾಯಿಗಳ, ಕುದುರೆಗಳ ಚಿಕಿತ್ಸೆ ಮಾಡುತ್ತಿದ್ದ. ನಂತರ ಮನುಷ್ಯರನ್ನು ಚಿಕಿತ್ಸೆ ಮಾಡಿ ಪ್ರಸಿದ್ಧಿಯನ್ನು ಪಡೆದ. ಝೆಕೊಸ್ಲೋವಾಕಿಯಾ ಲಿಡೇವಿಲ್ ಎಂಬಲ್ಲಿ 'ಸ್ವಾಸ್ಥ್ಯ ಗೃಹ'ವನ್ನು ತೆರೆದ. ಇವನಿಗೂ ಸಮಕಾಲೀನ ಡಾಕ್ಟರರ ವಿರೋಧ ಕಟ್ಟಿಕೊಳ್ಳಬೇಕಾಯಿತು. ಇವನಿಗೆ ಕೆಲ ಕಾಲ ಜೈಲುವಾಸದ ಶಿಕ್ಷೆ ಕೂಡಾ ಆಯಿತು. ೧೮೪೭ರಲ್ಲಿ ಸ್ಥಳೀಯ ಡ್ಯೂಕನ ಕಾಲಿಗೆ ಗಾಯವಾಗಿತ್ತು. ಆ ಕಾಲದ ಪ್ರಸಿದ್ಧ ಡಾಕ್ಟರರೆಲ್ಲ ಗುಣಪಡಿಸಲು ಅಸಮರ್ಥರಾದರು. ಬದುಕಿ ಉಳಿಯಬೇಕಾದರೆ 'ಅಂಪ್ಯೂಟ್' ಮಾಡುವುದು, ಅರ್ಥಾತ್ ಕಾಲು ಕತ್ತರಿಸುವುದು, ಒಂದೇ ಉಪಾಯವೆಂದರು. ಅವನಿಗೆ ಬದುಕಬೇಕಾಗಿತ್ತು. ಕಾಲನ್ನು ಉಳಿಸಿ ಕೊಳ್ಳಬೇಕಾಗಿತ್ತು. ಆಗ ಅವನು ಯಾವ ದಾರಿಯೂ ತೋಚದೇ ಜೋಹಾನ್ಸನನ ಬಳಿಗೆ ಬಂದ, ಕೆಲ ತಿಂಗಳ ಚಿಕಿತ್ಸೆ ಪಡೆದು ಪೂರ್ತಿವಾಸಿಗೊಂಡ. ತಾನು ವಾಸಿಯಾದ ಮೇಲೆ ತನ್ನ ಚಿಕಿತ್ಸೆಗೆ ಸಂಬಂಧಿಸಿದ ವಿವರಗಳನ್ನು ಒಂದು ಪುಸ್ತಕದ ರೂಪದಲ್ಲಿ ಹೊರತಂದು ಸೈನಿಕರಿಗೆಲ್ಲ ಹಂಚಿದ. ಜೋಹಾನ್ಸನನ ಕಳೆದುಹೋಗಿದ್ದ ಗೌರವ ಈ ಘಟನೆಯಿಂದಾಗಿ ಮರಳಿ ಬಂದಿತ್ತು.

ಇದೇ ಸಮಯದಲ್ಲಿ ಪ್ರಸಿದ್ದಿ ಪಡೆದ ಫಾದರ್ ಸ್ನಾಯಿಪ್ ಎಂಬುವ 'ಜಲ-ಚಿಕಿತ್ಸಾ' ಎಂಬ ಪುಸ್ತಕವನ್ನು ಬರೆದ. ಅದು ಬಹಳ ಪ್ರಸಿದ್ಧಿ ಪಡೆಯಿತು. ಆಸ್ಟ್ರೀಯಾದ ಇನ್ನೊಬ್ಬ ಆರ್ನಾಡ್ ರಿಕ್ಲೀ ಎಂಬುವ ಕೇನ್ ಪ್ರಾಂತದ ಟೆಲ್ಡಾಸ್ ಎಂಬಲ್ಲಿ ವಾಯು ಹಾಗೂ ಬಿಸಿಲಿನ ಚಿಕಿತ್ಸೆ ಪ್ರಾರಂಭಿಸಿದ. ಇನ್ನೊಬ್ಬ ಹೆನ್‌ರಿಚ್ ಲೆಮನ್ ಎಂಬುವ ಆಹಾರ ವಿಷಯದಲ್ಲಿ ತಜ್ಞನಾಗಿದ್ದ. ಆಹಾರ ವಿಜ್ಞಾನಕ್ಕೆ ಇವನಿಂದ ಸಹಾಯ ದೊರೆಯಿತು. ಲೂಟಿ ಕುನೆ ಎಂಬುವ ಈ ಕ್ಷೇತ್ರದಲ್ಲಿಯ ದೊಡ್ಡ ಆಚಾರ್ಯ ಪುರುಷನಾಗಿದ್ದ. ೨೦ನೆಯ ವಯಸ್ಸಿಗೆ ಇವನ ಆರೋಗ್ಯ ಹಾಳಾಗಿತ್ತು. ಡಾಕ್ಟರರಿಂದ ಚಿಕಿತ್ಸೆ ಮಾಡಿಸಿಕೊಂಡು ಇವನ ತಂದೆ ತಾಯಿ ಮೃತರಾದರು. ಆದ್ದರಿಂದ ಇವನಿಗೆ ಸಾಂಪ್ರದಾಯಿಕ ಚಿಕಿತ್ಸಾ ಪದ್ಧತಿಯ ಮೇಲಿನ

ವಿಶ್ವಾಸವೇ ಕಳೆದುಹೋಗಿತ್ತು. ಇವನು ಪ್ರಕೃತಿ ಚಿಕಿತ್ಸೆಗೆ ಶರಣಾದ. ಇವನ ಪ್ರಕೃತಿ ಶೀಘ್ರದಲ್ಲಿ ಗುಣಮುಖವಾಯಿತು. ಇವನು ಈ ಚಿಕಿತ್ಸೆಯ ಆರಾಧಕನಾದ. ಹಲವಾರು ವರ್ಷ ಪ್ರಕೃತಿ ಚಿಕಿತ್ಸೆಯ ಅಧ್ಯಯನ ಮಾಡಿದ.೧೮೬೫ರಲ್ಲಿ ಇವನು ಲಿಪಜಿಗ್ ಎಂಬಲ್ಲಿ ಒಂದು ಸ್ವಾಸ್ಥ ಗೃಹ ತೆರೆದ. ಬಿಸಿಲು ಸ್ನಾನ, ಬಾಷ್ಪಸ್ನಾನ, ಕಟಿಸ್ನಾನ, ಮೂತ್ರಸ್ನಾನ ಶಿಫಾರಸ್ಸು ಮಾಡುತ್ತಿದ್ದ. ರೋಗಿಯ ಮುಖಾವಲೋಕನ ಮಾತ್ರದಿಂದ ಅವನ ರೋಗ ಕಂಡು ಹಿಡಿಯುವ ಕಲೆ ಇವನಿಗೆ ಕರಗತವಾಗಿತ್ತು. ಇವನು ಬರೆದ ಎರಡು ಪುಸ್ತಕಗಳು ಬಹಳ ಪ್ರಸಿದ್ಧವಾಗಿವೆ. 'ದಿ ನ್ಯೂ ಸಾಯನ್ಸ್ ಆಫ್ ಹೀಲಿಂಗ್, ಮತ್ತು 'ದಿ ಸಾಯನ್ಸ್ ಆಫ್ ಫೇಸಿಯಲ್ ಎಕ್ಸ್‌ಪ್ರೇಶನ್ ಇವು ಜಗತ್ತಿನ ಅನೇಕ ಭಾಷೆಗಳಲ್ಲಿ ಅನುವಾದಗೊಂಡಿವೆ.

ಎಡಾಲ್ಫ್ ಜಸ್ಟ್ ಎಂಬುವ ಜರ್ಮನಿಯ ಹರ್ಜ್ ಪರ್ವತದ ಮೇಲೆ ಒಂದು ಸ್ಯಾನಿಟೋರಿಯಂ ಸ್ಥಾಪಿಸಿದ. ಇವನಿಗೆ 'ಮಣ್ಣಿನ ಚಿಕಿತ್ಸೆಯ ಜನಕ' ಎಂದು ಕರೆಯಲಾಗುತ್ತದೆ. ಇವನ ಜಗತ್‌ಪ್ರಸಿದ್ಧ ಪುಸ್ತಕ 'ರಿಟರ್ನ್ ಟು ನೇಚರ್ (ಮರಳಿ ಪ್ರಕೃತಿಯೆಡೆಗೆ) ಬಹಳ ಪ್ರಸಿದ್ಧಿ ಪಡೆಯಿತು. ಗಾಂಧೀಜಿಯವರ ಮೇಲೆ ಬಹಳ ಪ್ರಭಾವ ಬೀರಿದ ಪುಸ್ತಕವಿದು. ಇದನ್ನು ವಿಠಲದಾಸಮೋದಿಯವರು ಹಿಂದಿಗೆ ಅನುವಾದಿಸಿದ್ದಾರೆ. ಇವನ ಪ್ರಕಾರ ಪ್ರಕೃತಿಯ ನಿಯಮೋಲ್ಲಂಘನೆಯೇ ರೋಗಕ್ಕೆ ಕಾರಣ. ಪ್ರಕೃತಿ ಚಿಕಿತ್ಸೆಯಲ್ಲಿ ಹೆಸರು ಮಾಡಿದ ಅಮೇರಿಕನ್ ಜೇಮ್ಸ್ ಸಿ ಜ್ಯಾಕ್‌ಸನ್ ಅಮೇರಿಕೆಯಲ್ಲಿ ಜಲಚಿಕಿತ್ಸೆ ಪ್ರಾರಂಭಿಸಿದ. ಇವನು ಮೆಡಿಕಲ್ ಕಾಲೇಜಿನಲ್ಲಿ ಪ್ರಾಧ್ಯಾಪಕನಾಗಿದ್ದ. ನ್ಯೂಯಾರ್ಕ್‌ನಲ್ಲಿ ಜ್ಯಾಕ್ಸ್‌ನ್ ಸ್ಯಾನಿಟೋರಿಯಂ ಪ್ರಾರಂಭಿಸಿದ. ಅಲ್ಲಿ ಔಷದಗಳ ಬಳಕೆಯನ್ನು ಬಹಿಷ್ಕರಿಸಿ ಜಲಚಿಕಿತ್ಸೆ, ವಿಶ್ರಾಂತಿ, ವೈಜ್ಞಾನಿಕ ವ್ಯಾಯಾಮ, ಆಹಾರ, ಮನೋವೈಜ್ಞಾನಿಕ ಉಪಚಾರ ಪ್ರಾರಂಭಿಸಿದ. ಪ್ರಕೃತಿ ಚಿಕಿತ್ಸೆಗೆ ಜೋರುಕೊಟ್ಟ, ಅಮೇರಿಕೆಯ ಇನ್ನೊಬ್ಬ ಪ್ರಕೃತಿ ಚಿಕಿತ್ಸಕ ಡಾ॥ ರಸೆಲ್ ಟಿ ಟ್ರಾಲ್ ಪ್ರಾಕೃತಿಕ ಜೀವನ ಮತ್ತು ರೋಗೋಪಚಾರದ ಬಗ್ಗೆ ವಿಶ್ವ ವಿಖ್ಯಾತ ಪುಸ್ತಕ ಬರೆದ. ಇನ್ನೊಬ್ಬ ಅಮೇರಿಕನ್ ಡಾಕ್ಟರ್ ಜೆ. ಎಚ್. ಕೆಲಾಗ್ ಎಂಬುವ ಜಲಚಿಕಿತ್ಸೆಗಳ ಬಗ್ಗೆ ಪುಸ್ತಕ ಬರೆದ. ಪ್ರಕೃತಿ ಚಿಕಿತ್ಸೆಯ ವಿಚಾರಧಾರೆಯ ಮೇಲೆ ನಿರ್ಣಾಯಕ ಪ್ರಭಾವ ಬೀರಿದ ಅಮೇರಿಕನ್ ಡಾಕ್ಟರ್ ಡಾ॥ಹೆನ್ರಿ ಲಿಂಡರ್‌ಹುಲ್ ಎಂಬುವನ ಸಿದ್ಧಾಂತವನ್ನು ಆಧುನಿಕ ಪ್ರಕೃತಿ ಚಿಕಿತ್ಸಕರು ಅನುಸರಿಸುತ್ತಾರೆ. ಅವನ ಪ್ರಕಾರ, ಮನುಷ್ಯ ಅಧಿಕಾಧಿಕ ರೋಗಗಳಿಗೆ ಬಲಿಯಾಗುವುದಕ್ಕೆ ಕಾರಣ ಅವನು ರೋಗವನ್ನು ಹತ್ತಿಕ್ಕಲು ಔಷಧಿ ಹಾಗೂ ಸೂಜಿಮದ್ದು ಬಳಸುತ್ತಾನೆ. ಇದರ ಪರಿಣಾಮವಾಗಿ ಇನ್ನೂ ಹೆಚ್ಚಿನ ಭೀಕರ ಕಾಯಿಲೆಗಳಿಗೆ ತುತ್ತಾಗುತ್ತಾನೆ. 'ಪ್ರಕೃತಿ ಚಿಕಿತ್ಸೆಯ ಹಲವು ಮುಖಗಳಿಗೆ ಇವನು

ಒಂದು ವೈಜ್ಞಾನಿಕ ರೂಪ ಕೊಡಲು ಪ್ರಯತ್ನಿಸಿದ. 'ಚಕ್ಷು ವಿಜ್ಞಾನ'ದ ಮೇಲೊಂದು ಪುಸ್ತಕ ಬರೆದಿದ್ದಾನೆ. 'ದಿ ಪಿಲಾಸೊಫಿ ಆ್ಯಂಡ್ ಪ್ರಾಕ್ಟೀಸ್ ಆಫ್ ನ್ಯಾಚುರಲ್ ಥೆರಪ್ಟಿಕ್' ಎಂಬುದು ಅವನ ಇನ್ನೊಂದು ಪುಸ್ತಕ. ಇವನು ಮೊದಲು ಪರಂಪರಾಗತ ಚಿಕಿತ್ಸೆ ಅನುಸರಿಸುತ್ತ ಬಂದ ಡಾಕ್ಟರ್, ಒಮ್ಮೆ ಇವನಿಗೆ ಕಾಯಿಲೆಯಾದಾಗ ಕಟು ಅನುಭವ ಬಂತು. ಔಷಧ, ವಿಜ್ಞಾನ, ಶಸ್ತ್ರಚಿಕಿತ್ಸೆ ಇವನ ಸಹಾಯಕ್ಕೆ ಬರಲಿಲ್ಲ. ಗುಣಪಡಿಸಲು ವಿಫಲಗೊಂಡವು. ಆಗ ಇವನು ಪ್ರಾಕೃತಿಕ ಚಿಕಿತ್ಸಾ ಸಿದ್ಧಾಂತಕ್ಕೆ ಮೊರೆ ಹೋದ. ಮುಂದೆ ಅದರ ಆರಾಧಕನಾದ, ಜೆ.ಎಚ್. ಟಿಲ್‌ಡೆನ್ ಎಂಬ ಡಾಕ್ಟರ್ 'ಜೀವನ ರೀತಿ ಬದಲಿಸುವ ವಿಧಾನ ರೋಗ ನಿವಾರಣೆಯಲ್ಲಿ ಬಹಳ ಮಹತ್ವದ ಪಾತ್ರ ವಹಿಸುತ್ತದೆ' ಎನ್ನುತ್ತಾನೆ. 'ಇಂಪೇರ್ಡ್‌ಹೆಲ್ತ್' ಇವರ ಪ್ರಸಿದ್ಧ ಪುಸ್ತಕ. ಡಾ॥ಬೆನೆಡಿಕ್ಟ್ ಲಸ್ಟ್ ಅವರ ಹೆಸರನ್ನು ನೆನೆಯದಿದ್ದರೆ ಪ್ರಕೃತಿ ಚಿಕಿತ್ಸೆಯ ಇತಿಹಾಸ ಅಪೂರ್ಣವಾಗುತ್ತದೆ ಎಂದು ವಿಠಲದಾಸ ಮೋದಿ ಬರೆಯುತ್ತಾರೆ. ಡಾ। ಲಸ್ಟ್ ಅಮೇರಿಕೆಯ ಅಗ್ರಗಣ್ಯ ನೇಚರೋಪಥಿ ಕಾಲೇಜಿನ ಮುಖ್ಯಸ್ಥರಾಗಿದ್ದರು.

ಮೇಲಿನ ಸಂಗತಿಗಳನ್ನು ತಿಳಿದುಕೊಂಡ ಮೇಲೆ ಕೆಲವು ಸತ್ಯ ಸಂಗತಿಗಳು ಮನದಟ್ಟಾಗುತ್ತವೆ. ಆಕಾಶದಿಂದ ಮೋಡಗಳ ಮುಖಾಂತರ ಮಳೆಯಾಗಿ ಸುರಿಯುವ ನೀರು ಶುದ್ಧವಾಗಿಯೇ ಇರುತ್ತದೆ. ಆದರೆ ಸಮುದ್ರದಲ್ಲಿ ಬಿದ್ದಾಗ ಅದು ಉಪ್ಪು ನೀರಾಗುತ್ತದೆ, ನದಿಯಲ್ಲಿ ಹರಿದಾಗ ಅದು ಸಿಹಿನೀರಾಗಿರುತ್ತದೆ. ಗುಡ್ಡ ಪರ್ವತಗಳಲ್ಲಿ ಸುರಿದ ನೀರು ಹರಿದು ಬರುವಾಗ ಖನಿಜ ದ್ರವ್ಯಗಳೊಡನೆ ಬೆರೆತು ಒಳ್ಳೆಯ ಔಷಧಿಸತ್ವ ಪಡೆಯುತ್ತದೆ. ಮನುಷ್ಯ ಆರೋಗ್ಯವಂತನಾಗಿಯೇ ಹುಟ್ಟುತ್ತಾನೆ. ಅವನು ಹೇಗೆ ಬೆಳೆಯುತ್ತಾನೆ ನೋಡಬೇಕು. ಮನುಷ್ಯ ಪ್ರಕೃತಿಗೆ ಸರಿಹೊಂದಿ ನೈಸರ್ಗಿಕವಾಗಿ ಬೆಳೆಯಬೇಕು. ಪ್ರಕೃತಿಯಿಂದ (ನಿಸರ್ಗದಿಂದ) ದೂರ ಸರಿದಷ್ಟೂ ಅವನ ಪ್ರಕೃತಿ ಕೆಡುತ್ತದೆ. ಪ್ರಾಣಿಗಳು ಪ್ರಕೃತಿಗೆ (ನಿಸರ್ಗಕ್ಕೆ) ಹೊಂದಿಕೊಂಡು ಬಾಳುವುದರಿಂದ ಅವುಗಳ ಆರೋಗ್ಯ ಚೆನ್ನಾಗಿರುತ್ತದೆ. ಆದರೆ ಸಾಕು ಪ್ರಾಣಿಗಳು ಮನುಷ್ಯನಂತೆ ಅನೈಸರ್ಗಿಕ ಜೀವನ ಪದ್ಧತಿ ಅನುಸರಿಸುವುದರಿಂದ ಅವುಗಳಿಗೆ ಮನುಷ್ಯರಂತೆ ಕಾಯಿಲೆಗಳ ಕಾಟವಿರುತ್ತದೆ. ಪಶುವೈದ್ಯರೆಡೆ ನಿಯಮಿತವಾಗಿ ಹೋಗಬೇಕಾಗುತ್ತದೆ. ಸಾಕಿದ ಗೋರಿಲ್ಲಾಕ್ಕೆ ಸಿಗರೇಟ್ ಸೇದಲು ಕಲಿಸಿದರು, ಅದಕ್ಕೆ ಮುಂದೆ ಕ್ಯಾನ್ಸರ್ ರೋಗದ ಬಾಧೆಯಾಯಿತಂತೆ. ಪ್ರತಿಯೊಂದು ಕಾಯಿಲೆಯನ್ನೂ ನಾವು ಔಷಧಿಯಿಲ್ಲದೆ ಗುಣಪಡಿಸಿಕೊಳ್ಳಬಹುದು. ನಿಸರ್ಗ ಚಿಕಿತ್ಸೆ ಮತ್ತು ಯೋಗಾಭ್ಯಾಸ ನಮಗೆ ವರದಾನವಾಗಿ ದೊರೆತಿದೆ. ನಮ್ಮೆದುರು ಎರಡು ದಾರಿಗಳಿವೆ, ದುಡ್ಡು ವೆಚ್ಚಮಾಡಿ ಕಾಯಿಲೆಗಳನ್ನು ಆಹ್ವಾನಿಸುವುದು, ಏನೂ ವೆಚ್ಚಮಾಡದೆ ಆರೋಗ್ಯವನ್ನು ಪಡೆಯುವುದು. ಆಯ್ಕೆ ನಮ್ಮ ಕೈಯಲ್ಲಿದೆ.

***

ಯಂತ್ರಗಳಿಂದಾಗಿ ಕಡೆಗಣಿಸಲ್ಪಟ್ಟ ಮನುಷ್ಯ

-ಪ್ರಸನ್ನ

(ಇತ್ತೀಚಿಗೆ ಪ್ರಕಟಗೊಂಡ ಲೇಖಕರ "ದೇಸಿ ಜೀವನ ಪದ್ಧತಿ" ಎಂಬ ಪುಸ್ತಕದಿಂದ ಆಯ್ದ ಲೇಖನ)

ಯಂತ್ರಗಳಿರದಿದ್ದಾಗಲೂ ಜನರು ಬದುಕಿದ್ದರು, ಅಷ್ಟೇ ಅಲ್ಲ ಸಾಕಷ್ಟು ಸುಸಂಸ್ಕೃತರಾಗಿದ್ದರು ಎಂಬ ಸತ್ಯವನ್ನು ನಾವು ಮರೆಯುತ್ತೇವೆ. ಸಾವಿರಾರು ವರ್ಷಗಳ ಹಿಂದೆ ಕಾಡಿನಲ್ಲಿ ಬದುಕಿದ್ದ ಬೇಡರವನಾದ ವಾಲ್ಮೀಕಿಯು ರಾಮಾಯಣದಂತಹ ಮಹಾಕಾವ್ಯವನ್ನು ರಚಿಸಿದ್ದ ಎನ್ನುವ ಸಂಗತಿಯಾಗಲೀ ಅಥವಾ ಮೂರು ಸಾವಿರ ವರ್ಷಗಳಷ್ಟು ಹಿಂದೆಯೇ ಹೋಮರ್ 'ಇಲಿಯಡ್' ಮಹಾಕಾವ್ಯ ರಚಿಸಿದ್ದ ಎಂಬ ಸಂಗತಿಯನ್ನಾಗಲಿ ನಾವು ನೆನೆದಾಗ ಸುಸಂಸ್ಕೃತಿಗೂ ಆಧುನಿಕ ತಂತ್ರಜ್ಞಾನಕ್ಕೂ ಯಾವುದೇ ಸಂಬಂಧವಿಲ್ಲ ಎಂಬ ಸರಳ ಸತ್ಯ ಹೊಳೆಯುತ್ತದೆ. ಆದರೆ ದುರಂತವೆಂದರೆ ಪರಂಪರೆಗೂ ಸುಸಂಸ್ಕೃತಿಗೂ ನಡುವೆ ಸಹಿತ ಸುಮಧುರ ಸಂಬಂಧವಿಲ್ಲ!.

ಹಾಗಿದ್ದಲ್ಲಿ ಆಧುನಿಕತೆ ಎಂಬುದು ಏನು? ಆಧುನಿಕತೆ ಎಂಬುದು ಒಂದು ದ್ವಂದ್ವ, ಅದು ಒಳ್ಳೆಯದ್ದೂ ಹೌದು ಕೆಟ್ಟದ್ದೂ ಹೌದು. ಅದನ್ನು ಸಂಪೂರ್ಣವಾಗಿ ತಿರಸ್ಕರಿಸುವುದಾಗಲೀ ಅಥವಾ ಇಡಿಯಾಗಿ ಅಪ್ಪಿಕೊಳ್ಳುವುದಾಗಲೀ ಪರಿಸ್ಥಿತಿಯ ಸರಳೀಕರಣವಾಗುತ್ತದೆ. ಅದೇ ರೀತಿ ಹಳತೂ ಕೂಡ. ಹಳತಿನಲ್ಲಿ ಎಲ್ಲವೂ ಛಂದವಿದ್ದಿದ್ದರೆ ಹಳತು ಸೋಲುತ್ತಲೇ ಇರಲ್ಲಿಲ್ಲ. ಪುರಾತನ ಭಾರತೀಯ ಸಮಾಜವು ಎಲ್ಲ ರೀತಿಯಿಂದಲೂ ಆರೋಗ್ಯಕರವಾಗಿದ್ದಿದ್ದರೆ ನಾವು ಬ್ರಿಟಿಷರ ಗುಲಾಮರಾಗುತ್ತಿದ್ದಿಲ್ಲ.

ಮಾನವನ ಇತಿಹಾಸದಲ್ಲಿ ಆಧುನಿಕತೆಯೆಂಬುದು ಅನಿವಾರ್ಯವಾದ ಹಾಗೂ ಅವಶ್ಯಕವಾದ ಬೆಳವಣಿಗೆಯಾಗಿದೆ. ಆಧುನಿಕತೆಯಲ್ಲಿ ಒಳ್ಳೆಯ ಅಂಶಗಳು ಹಲವಾರಿವೆ. ಮಾನವನಿಗೆ ಸಂಪೂರ್ಣ ವೈಚಾರಿಕ ಸ್ವಾತಂತ್ರ್ಯವನ್ನು ನೀಡಿದ್ದು ಆಧುನಿಕ ಯುಗವೇ ಹೌದು. ವೈಜ್ಞಾನಿಕತೆಯನ್ನು ಬೆಂಬಲಿಸಿದ್ದು, ಸಮಾಜವಾದ ಪ್ರಜಾಪ್ರಭುತ್ವ ವ್ಯವಸ್ಥೆ, ಮಹಿಳಾ ಸ್ವಾತಂತ್ರ್ಯ ಇತ್ಯಾದಿ ಹಲವು ಹತ್ತು ಸಂಗತಿಗಳನ್ನು ಸಾಧ್ಯವಾಗಿಸಿದ್ದು ಆಧುನಿಕ ಯುಗವೇ ಹೌದು.

ನಮ್ಮ ಗ್ರಾಮಗಳನ್ನೇ ತೆಗೆದುಕೊಳ್ಳಿ. ಅಲ್ಲಿ ಮನೆ ಮಾಡಿದ್ದ, ಈಗಲೂ ಮನೆ ಮಾಡಿರುವ ಜಾತಿಪದ್ಧತಿ, ಪಾಳೆಯಗಾರಿ ಪ್ರವೃತ್ತಿ, ಲಿಂಗಬೇಧ ನೀತಿ,

ಅವಿದ್ಯೆ, ಅಶಿಸ್ತುಗಳು ಗ್ರಾಮೀಣ ಸಂಸ್ಕೃತಿಯ ವಿನಾಶಕ್ಕೆ ಕಾರಣವಾದವು. ಹಾಗಾಗಿಯೇ ಇವತ್ತಿಗೂ ಹಳ್ಳಿಯ ಬಡವರು ಹೇಗಾದರೂ ಮಾಡಿ ಪಟ್ಟಣ ಸೇರಬೇಕೆಂದು ಹಾತೊರೆಯುವುದು. ಹೆಚ್ಚಿನ ಬಡವರು ಕೆಳಜಾತಿಯ ಶೂದ್ರರೂ ಹೌದು. ಪಟ್ಟಣದಲ್ಲಿ ಅವರು ಶ್ರೀಮಂತಿಕೆಗಿಂತ ಹೆಚ್ಚಾಗಿ ಸಾಮಾಜಿಕ ಬಿಡುಗಡೆಯನ್ನು ಕಾಣುತ್ತಾರೆ.

ಕೆಟ್ಟು ಪಟ್ಟಣ ಸೇರುವ ಹಳ್ಳಿಯ ಬಡವ ಆತ್ಮಾಹುತಿ ಮಾಡಿಕೊಳ್ಳಲು ಹೊರಟ ಧಾರ್ಮಿಕ ಹುತಾತ್ಮನಂತೆ ಕಾಣುತ್ತಾನೆ ನನಗೆ. ತನ್ನ ಬದುಕು ಹೇಗೂ ನಾಶವಾಗಿದೆ, ತನ್ನ ಮಕ್ಕಳಾದರೂ ಪಟ್ಟಣದ ಸ್ವಚ್ಛಂದ ಬದುಕಿನಲ್ಲಿ ಬೆಳೆದು ಮುಂದೆ ಬಂದಾರು ಎಂಬ ಹಂಬಲದಿಂದ ತನ್ನ ಸುಖವನ್ನು ಬದಿಗಿಟ್ಟು ಪಟ್ಟಣ ಸೇರುತ್ತಿದ್ದಾರೆ ಹೆಚ್ಚಿನ ಬಡವರು. ಹಾಗೆ ಪಟ್ಟಣ ಸೇರಿದ ಬಡವರ ಎಷ್ಟೋ ಮಕ್ಕಳು ಓದಿ ಮುಂದೆ ಬಂದದ್ದನ್ನು ನಾನು ಕಣ್ಣಾರೆ ಕಂಡಿದ್ದೇನೆ. ನಾವು ಏನೇ ಹೇಳಲಿ ಈ ದೇಶದ ಬಡವರು ಆಧುನಿಕತೆಯನ್ನು ಬೆಂಬಲಿಸುತ್ತಾರೆ. ಇಂಗ್ಲೀಷನ್ನು ಬೆಂಬಲಿಸುತ್ತಾರೆ, ನೈಲಾನು ಪ್ಲಾಸ್ಟಿಕ್ಕುಗಳನ್ನು ಬೆಂಬಲಿಸುತ್ತಾರೆ.

ಮನುಷ್ಯರನ್ನು ಕಡೆಗಣಿಸಿ ಯಂತ್ರಗಳಿಗೆ ಪ್ರಾಮುಖ್ಯತೆ ನೀಡಿದ್ದು ಆಧುನಿಕ ಯುಗದ ಮೊದಲ ದುರಂತವಾಗಿದೆ. ತಂತ್ರಜ್ಞಾನದ ಬಲದಿಂದ ಪ್ರಕೃತಿಯನ್ನೇ ಗೆಲ್ಲುತ್ತೇನೆ ಎಂದು ಹೊರಟಿದ್ದು ಈ ಯುಗದ ಅಹಂಕಾರವಾಗಿದೆ. ಇವೆರಡು ಕಾರಣಕ್ಕಾಗಿ ಮಾನವ ಕುಲವಿಂದು ಅಪಾರ ಬೆಲೆ ತೆರುತ್ತಿದೆ. ಮನುಷ್ಯರ ಕಾಯಕ ಹಾಗೂ ನೈಸರ್ಗಿಕ ಸಂಪನ್ಮೂಲಗಳು ಇಷ್ಟೊಂದು ಹೀನಾಯ ಸ್ಥಿತಿಯನ್ನು ತಲುಪಿದ್ದು ಪ್ರಾಯಶಃ ಮಾನವ ಇತಿಹಾಸದಲ್ಲಿಯೇ ಮೊದಲು ಎನ್ನಬಹುದು.

ಆಧುನಿಕತೆಯ ದುರಂತವೆಂದರೆ, ವೈಚಾರಿಕ ಸ್ವಾತಂತ್ರ್ಯ ಹಾಗೂ ವೈಜ್ಞಾನಿಕ ಅನ್ವೇಷಣೆಯಲ್ಲಿ ಆರಂಭವಾದ ನವಯುಗವು ಲಾಭಬಡುಕುತನದಲ್ಲಿ ಪರ್ಯವಸಾನ ಹೊಂದಿತು. ಸತ್ಯದ ಅನ್ವೇಷಣೆಯಾಗಿ ಆರಂಭವಾದ ವೈಜ್ಞಾನಿಕ ಚಳುವಳಿಯು ಸುಖದ ಆಟಿಕೆಗಳನ್ನು ಕಂಡುಹಿಡಿಯುವ ಸೀಮಿತ ಉದ್ದೇಶದಲ್ಲಿ ತೃಪ್ತಿ ಕಂಡುಕೊಂಡಿತು. ಹಾಗಾಗಿ ವಿಜ್ಞಾನವೆಂಬುದು ತಂತ್ರಜ್ಞಾನಕ್ಕೆ ಅಡಿಯಾಳಾಗಿದೆ, ವಿಜ್ಞಾನಿಗಳು ಬಂಡವಾಳಶಾಹಿ ಅರ್ಥವ್ಯವಸ್ಥೆಗೆ ಪೂರಕವಾಗಿ ದುಡಿಯುತ್ತಿದ್ದಾರೆ.

ಆಧುನಿಕ ಯುಗವು ಧಾರ್ಮಿಕ ಶೋಷಣೆ, ಜಾತೀಯತೆ ಹಾಗೂ ಮೂಢ ನಂಬಿಕೆಗಳನ್ನು ನಿರ್ಮೂಲನ ಮಾಡುತ್ತೇನೆ ಎಂದು ಹೊರಟಿತು. ಆದರೆ ಕಡೆಗೆ ಆದದ್ದೇ ಬೇರೆ. ಆಧುನಿಕ ಯುಗವು ಧಾರ್ಮಿಕ ಶೋಷಣೆಯನ್ನು

ನಿವಾರಿಸುವ ಬದಲಾಗಿ ಧರ್ಮ ಹಾಗೂ ನೈತಿಕತೆಗಳನ್ನೇ ನಿವಾರಿಸಿ ಬಿಟ್ಟಿತು. ಜಾತೀಯತೆಯನ್ನು ನಿರ್ಮೂಲನ ಮಾಡುವ ಬದಲಾಗಿ ಜಾತೀಯತೆಯ ಒಟ್ಟಿಗೆ ರಾಜಿಮಾಡಿಕೊಂಡಿತು. ಹಾಗಾಗಿ ಇಂದು ಜಾತೀಯತೆಯ ಹೊಸ ಹೊಸ ರೂಪಗಳನ್ನು ನಾವು ಕಾಣುವಂತಾಗಿದೆ. ಹಳೆಯ ಮೂಢನಂಬಿಕೆಗಳ ಜಾಗದಲ್ಲಿ ಹೊಸ ಮೂಢನಂಬಿಕೆಗಳು ಬೇರೂರಿವೆ.

ನೈತಿಕತೆ ಅನೈತಿಕತೆಗಳ ನಡುವಿನ ಅಂತರವನ್ನೇ ಅಳಿಸಿಹಾಕಿದ ಈ ಯುಗವು ನೈತಿಕತೆಯ ಜಾಗದಲ್ಲಿ ವೃತ್ತಿಪರತೆ ಎಂಬ ಹೊಸ ಮೌಲ್ಯವನ್ನು ಸ್ಥಾಪಿಸಿತು. ವೃತ್ತಿಪರತೆ ನೈತಿಕವೂ ಅಲ್ಲ ಅನೈತಿಕವೂ ಅಲ್ಲ ಎಂದು ಸಾರಿತು. ಉದಾಹರಣೆಗೆ ಬಾಂಬ್ ತಯಾರಿಸಬೇಕಾದ ವಿಜ್ಞಾನಿ ಉತ್ತಮ ಬಾಂಬನ್ನು ತಯಾರಿಸುವುದು ವೃತ್ತಿಧರ್ಮ; ಬಾಂಬಿನ ದುಷ್ಪರಿಣಾಮಗಳ ಬಗ್ಗೆ ಚಿಂತಿಸುತ್ತಾ ಕೂರುವುದು ವೃತ್ತಿಪರತೆಯಲ್ಲ, ವ್ಯರ್ಥ ಕಾಲಹರಣ ಎಂದು ಸಾರಿತು. ದೇಸೀ ಚಳುವಳಿಯನ್ನು ಈ ಎಲ್ಲ ಗೊಂದಲಗಳ ನಡುವಿನಿಂದ ಹೊರತರಬೇಕಾಗಿದೆ.

ಅನೇಕರು ಭಾರತೀಯ ಪರಂಪರೆಯನ್ನು ಏಕಸೆಲೆಯ ಪ್ರವಾಹವಾಗಿ ಕಾಣುತ್ತಾರೆ. ಆದರೆ ನಮ್ಮ ಪರಂಪರೆಯಲ್ಲಿ ಹಲವು ಚಳುವಳಿಗಳು ಘಟಿಸಿವೆ, ಹಲವು ಜೀವನ ಪದ್ಧತಿಗಳು ಒಟ್ಟಿಗೆ ಬದುಕಿವೆ. ಮಧ್ಯಕಾಲೀನ ಭಕ್ತಿ ಚಳುವಳಿಯನ್ನೇ ಗಮನಿಸಿದರೆ, ಅದು ಕಾಯಕ ಕೇಂದ್ರಿತವಾಗಿತ್ತು ಹಾಗೂ ವೈದಿಕ ಪರಂಪರೆಯನ್ನು ಧಿಕ್ಕರಿಸಿತ್ತು. ಭಕ್ತಿ ಚಳುವಳಿಯ ಹೆಚ್ಚಿನ ಸಂತರು ಕೆಳಜಾತಿಗಳಿಂದ ಬಂದ ಕಾಯಕಜೀವಿಗಳಾಗಿದ್ದರು.

ಒಂದು ಅರ್ಥದಲ್ಲಿ ಭಕ್ತಿ ಚಳುವಳಿಯ ಉದ್ದೇಶವೇನಿತ್ತೋ ಅದೇ ಉದ್ದೇಶ ಇಂದಿನ ದೇಸಿ ಚಳುವಳಿಯದ್ದೂ ಹೌದು. ವ್ಯತ್ಯಾಸವಿಷ್ಟೆ; ಅಂದು ಯಂತ್ರಗಳಿರಲಿಲ್ಲ, ಇಂದು ಇವೆ. ಅಂದಿನ ದಬ್ಬಾಳಿಕೆ ಮೇಲ್ಜಾತಿ ಹಾಗೂ ಮೇಲ್ವರ್ಗಗಳ ಧಾರ್ಮಿಕ ಹಾಗೂ ಸಾಮಾಜಿಕ ಹಿಡಿತದ ಮೂಲಕ ಸಾಧ್ಯವಾಗಿತ್ತು. ಇಂದಿನ ದಬ್ಬಾಳಿಕೆ ಯಂತ್ರಗಳು ಹಾಗೂ ತಂತ್ರಜ್ಞಾನದ ಮೂಲಕ ಆಗುತ್ತಿದೆ. ಸರಳವಾಗಿ ಹೇಳುವುದಾದರೆ ಅಂದು ಮಂತ್ರಗಳ ಮೂಲಕ ನಡೆದಿದ್ದ ಶೋಷಣೆ ಇಂದು ಯಂತ್ರಗಳ ಮೂಲಕ ನಡೆದಿದೆ.

ಹಾಗಾಗಿ ಯಂತ್ರಗಳ ಪ್ರಾಮುಖ್ಯತೆಯನ್ನು ಇಷ್ಟಿಷ್ಟೆ ಕಳಚುತ್ತ, ಕಾಯಕ ಕೇಂದ್ರಿತ ಜೀವನಪದ್ಧತಿಯನ್ನು ಪುನರ್ ಸ್ಥಾಪಿಸುವುದು ಇಂದಿನ ಜರೂರಾಗಿದೆ. ಮನುಷ್ಯನ ದುಡಿಮೆಗೆ ಮತ್ತೊಮ್ಮೆ ಬೆಲೆ ಬರುವಂತೆ ಮಾಡುವ ಮೂಲಕ ಮನುಷ್ಯನಿಗೆ ಬೆಲೆ ಬರುವಂತೆ ಮಾಡಬೇಕಿದೆ. ಸಮಾಜವಾದ, ಸಮತಾವಾದಗಳು ಕೂಡ ಇದೇ ಮಾತನ್ನು ಹೇಳುತ್ತದೆ, ಆದರದು ವೈಯುಕ್ತಿಕ ಮನಃಪರಿವರ್ತನೆಗಿಂತ ಮಿಗಿಲಾಗಿ ರಾಜಕೀಯ ಅಧಿಕಾರವನ್ನು ಹಿಡಿಯುವ

ಕಡೆಗೆ ಒತ್ತನ್ನು ನೀಡುತ್ತದೆ.

ಯಂತ್ರಯುಗದ ದುಷ್ಪರಿಣಾಮಗಳನ್ನು ಎದುರಿಸಲೆಂದು ರಾಜಕೀಯ ಪಕ್ಷವನ್ನು ಕಟ್ಟುವುದಾಗಲೀ, ಕಾನೂನು ಮಾಡುವುದಾಗಲೀ, ಅಥಾವಾ ಧಾರ್ಮಿಕ ನಿರ್ಬಂಧ ಹೇರುವುದಾಗಲೀ ಈಗಿನ ಸಂದರ್ಭದಲ್ಲಿ ನಿರೀಕ್ಷಿತ ಫಲ ನೀಡಲಾರದು. ಅವೆಲ್ಲವನ್ನೂ ನಾವು ಈಗಾಗಲೇ ಮಾಡಿ ಆಗಿದೆ. ಹಾಗಾಗಿ ಇಂದಿನ ಚಳುವಳಿಯು ವೈಯಕ್ತಿಕ ಸ್ಥಳದಲ್ಲಿ ನಡೆಯಬೇಕಾದ್ದು, ಹಾಗೂ ಇತ್ಯಾತ್ಮಕವಾದ ಸಾಧನೆಯಾಗಬೇಕಾದ್ದು ಅನಿವಾರ್ಯ. ಪ್ರತಿಯೊಬ್ಬ ವ್ಯಕ್ತಿಯೂ ಸ್ವಇಚ್ಛೆ ಹಾಗೂ ಸ್ವಸಂತೋಷದಿಂದ ತನ್ನ ಬದುಕಿನಲ್ಲಿ ಯಂತ್ರಗಳ ಪ್ರಾಮುಖ್ಯತೆಯನ್ನು ಕಡಿಮೆ ಮಾಡಿಕೊಳ್ಳಬಲ್ಲನಾದರೆ ಆಗ ಮಾತ್ರ ಬದಲಾವಣೆ ಸಾಧ್ಯವಾಗುತ್ತದೆ. ಎಲ್ಲೆಲ್ಲಿ ನಮ್ಮದೇ ಕೈಗಳಿಂದ ಕೆಲಸ ಮಾಡುವುದು ಸಾಧ್ಯವಿದೆಯೋ ಅಥವಾ ಎಲ್ಲೆಲ್ಲಿ ನಮ್ಮದೇ ಕಾಲುಗಳಿಂದ ನಡೆಯುವುದು ಸಾಧ್ಯವಿದೆಯೋ ಅಲ್ಲೆಲ್ಲ ಯಂತ್ರಗಳ ಕೈ ಕಾಲು ತಪ್ಪಿಸಬೇಕು.

ದುರಂತವೆಂದರೆ ನಾವುಗಳು ದೊಡ್ಡ ಮಾತುಗಳು ದೊಡ್ಡ ದೊಡ್ಡ ವಿಚಾರಗಳ ಭರದಲ್ಲಿ ದಿನನಿತ್ಯದ ಸಣ್ಣ ಪುಟ್ಟ ಸಂಗತಿಗಳನ್ನು ಗಮನಿಸುವುದೇ ಇಲ್ಲ. ಆದರೆ ಬದಲಾವಣೆ ಬರಬೇಕೆಂದರೆ ದಿನನಿತ್ಯದ ಈ ಸಣ್ಣ ಪುಟ್ಟ ಸಂಗತಿಗಳಲ್ಲಿ ಮೊದಲು ಬರಬೇಕು. ಆಗ ಮಾತ್ರ ಅದು ಪರಿಣಾಮವನ್ನು ಬೀರೀತು. ಅಡಿಗೆ ಮಾಡಿಕೊಳ್ಳುವುದಿರಬಹುದು, ಬಾವಿಯಿಂದ ನೀರು ಸೇದುವುದಿರಬಹುದು ಅಥವಾ ಆಫೀಸಿನಲ್ಲಿ ತನ್ನ ಕಾಗದಪತ್ರಗಳನ್ನು ತಾನೇ ತಂದುಕೊಳ್ಳುವುದಿರಬಹುದು ಇಂತಹ ಸಣ್ಣ ಪುಟ್ಟ ಸಂಗತಿಗಳು ಕೂಡ 'ಪರಿಸರಸ್ನೇಹಿ' ಜೀವನ ಪದ್ಧತಿಯನ್ನು ರೂಪಿಸುವಲ್ಲಿ ಮಹತ್ವದ ಹೆಜ್ಜೆಗಳಾಗಬಲ್ಲದು. ನನ್ನದೇ ಒಂದು ಉದಾಹರಣೆಯನ್ನು ನಾನಿಲ್ಲಿ ಹಂಚಿಕೊಳ್ಳಲು ಬಯಸುತ್ತೇನೆ.

ಹದಿನೈದು ವರ್ಷಗಳ ಹಿಂದೆ ನಾನು ದೆಹಲಿಯನ್ನು ತೊರೆದು ಹೆಗ್ಗೋಡಿನಲ್ಲಿ ವಾಸಿಸಲು ಬಂದೆ. ಆಗ ನಾನೊಂದು ಸಣ್ಣ ನಿರ್ಧಾರ ಕೈಗೊಂಡಿದ್ದೆ. ಅದೆಂದರೆ ಹೆಗ್ಗೋಡಿನ ಗ್ರಾಮೀಣ ವಾತಾವರಣದಲ್ಲಿ ತೈಲಚಾಲಿತ ವಾಹನವನ್ನು ಹೊಂದಬಾರದು ಎಂದು. ಮಿಕ್ಕಂತೆ ನನ್ನ ಮನೆಯಲ್ಲಿ ವಿದ್ಯುತ್ ಇದೆ, ನೀರೆತ್ತುವ ಪಂಪು, ಟೇಪ್ ರೆಕಾರ್ಡರ್, ದೂರವಾಣಿ ಎಲ್ಲವೂ ಇದೆ, ಆದರೆ ಖಾಸಗಿ ವಾಹನ ವ್ಯವಸ್ಥೆ ಇಟ್ಟುಕೊಂಡಿಲ್ಲ. ತೀರಾ ಅನಿವಾರ್ಯವಾದಾಗ ಊರಿನ ಸಾರ್ವಜನಿಕ ವ್ಯವಸ್ಥೆಯನ್ನು ಬಳಸುತ್ತೇನೆ. ಕೆಲವೊಮ್ಮೆ ಆಟೋರಿಕ್ಷಾಗಳು, ಟ್ಯಾಕ್ಸಿಗಳನ್ನು ಕೂಡ ಬಳಸಿದ್ದಿದೆ. ಇದೊಂದು ಸಣ್ಣ ಹೆಜ್ಜೆ. ಹೇಳಿಕೊಳ್ಳುವಂತಹ ಮಹತ್ಕಾರ್ಯವೇನಲ್ಲ.

ಆದರೂ ಆಗಾಗ ನನ್ನ ಸ್ನೇಹಿತರು, 'ಒಂದು ವೆಹಿಕಲ್ ಇಟ್ಟುಕೋ ಮಾರಾಯ! ಯಾಕೆ ಈ ರೀತಿ ಒದ್ದಾಡುತ್ತೀಯ' ಎಂದು ಹೇಳುತ್ತಿರುತ್ತಾರೆ. ಹಲವರಿಗೆ ನನ್ನ ರೀತಿ ವಿಚಿತ್ರ ಅನ್ನಿಸಿದೆ. ಆದರೆ ನನ್ನ ಬದುಕಿನಲ್ಲಿ ಈ ಒಂದು ನಿರ್ಧಾರದಿಂದಾಗಿ ಮಹತ್ವದ ಬದಲಾವಣೆಗಳು ಸಾಧ್ಯವಾಗಿವೆ. ನಾನು ಹೆಗ್ಗೋಡಿನಲ್ಲಿರುವಷ್ಟು ದಿನವೂ ಅನಿವಾರ್ಯವಾಗಿ ಏಳರಿಂದ ಎಂಟು ಕಿಲೋಮೀಟರು ನಡೆಯುತ್ತೇನೆ. ಚರಕ ಕೇಂದ್ರಕ್ಕೆ ಹೋಗುವುದು ಬರುವುದು, ಹೆಗ್ಗೋಡಿನ ಪೇಟೆಗೆ ಹೋಗುವುದು ಎಲ್ಲವೂ ನಡಿಗೆಯಲ್ಲೇ ಆಗುತ್ತದೆ. ನನ್ನ ಆತುರ ಪ್ರವೃತ್ತಿಗೆ ನಡಿಗೆಯಿಂದಾಗಿ ಕಡಿವಾಣ ಬಿದ್ದಿದೆ, ಆರೋಗ್ಯ ಕೊಂಚ ಸುಧಾರಿಸಿದೆ. ಹಾಗೆಂದು ನನ್ನ ಕೆಲಸಗಳೇನೂ ಹಿಂದೆ ಬಿದ್ದಿಲ್ಲ.

ಈ ಮಧ್ಯೆ ನಾನು ಮೂರು ವರ್ಷಗಳ ಅವಧಿಗೆ ರಂಗಾಯಣದ ನಿರ್ದೇಶಕನಾಗಿ ಮೈಸೂರಿನಲ್ಲಿದ್ದೆ. ಅಲ್ಲಿ ರಂಗಾಯಣದ ನಿರ್ದೇಶಕರಿಗೆಂದು ವಾಹನ ವ್ಯವಸ್ಥೆ ಇತ್ತು. ವಾಹನ ಓಡಿಸಲಿಕ್ಕೆಂದು ಚಾಲಕನೊಬ್ಬನಿದ್ದ. ಅಲ್ಲಿ ನನಗಾಗುತ್ತಿದ್ದ ಕಿರಿಕಿರಿಯೆಂದರೆ, ನನಗಾಗಿ ಆ ಚಾಲಕ ಕಾದಿರುತ್ತಿದ್ದ. ಆತನಿಗೆ ತನ್ನ ಕೆಲಸದಲ್ಲಿ ನಂಬಿಕೆ ಇರಲಿಲ್ಲ (ಪ್ರಾಯಶಃ ಇರಲಿಕ್ಕೆ ಸಾಧ್ಯವೂ ಇಲ್ಲ). ಮಡದಿ ಮಕ್ಕಳು ಸಂಸಾರ ಹಾಗೂ ಹಣಕಾಸಿನ ತೊಂದರೆಯತ್ತ ಆತನ ಏಕಾಗ್ರತೆ ಕೇಂದ್ರಿತವಾಗಿರುತ್ತಿತ್ತು. ಜೊತೆಗೆ ನಿರ್ದೇಶಕರ ವಾಹನ ವ್ಯವಸ್ಥೆ ರಂಗಾಯಣಕ್ಕೆ ಹೊರೆಯಾಗಿ ಪರಿಣಮಿಸಿತ್ತು. ವಾಹನವನ್ನು ಸರಕಾರಕ್ಕೆ ಹಿಂದಿರುಗಿಸಿ ಬಿಟ್ಟೆ. ಸಾಧ್ಯವಿದ್ದಷ್ಟೂ ಮನೆಯಿಂದ ರಂಗಾಯಣಕ್ಕೆ ಹಾಗೂ ಪೇಟೆಗೆ ಕಾಲ್ನಡಿಗೆಯಲ್ಲಿ ಓಡಾಡುತ್ತಿದ್ದೆ. ಮೈಸೂರಿನಲ್ಲಿ ಕೂಡ ನನಗೆ ಸ್ವಂತದ ವಾಹನವಿಲ್ಲದಿರುವುದು ಸಮಸ್ಯೆಯಾಗಲಿಲ್ಲ.

***

ಚಲನಶೀಲ ಸಮಾಜಕ್ಕಾಗಿ ಕೆಲವು ಸಲಹೆಗಳು

–ಎಚ್.ಎಸ್.ದೊರೆಸ್ವಾಮಿ

ಈ ಸಮಾಜಕ್ಕೆ ಚಲನಶೀಲತೆ ಬರಬೇಕಾದರೆ, ಮೌಲ್ಯಗಳ ಬದಲಾವಣೆ ಅತ್ಯಗತ್ಯ. ಸಾಮಾಜಿಕವಾಗಿ ನಮ್ಮ ಸಮಾಜ ಜಾತಿ, ಧರ್ಮಗಳ ಹೆಸರಿನಲ್ಲಿ ಛಿದ್ರಛಿದ್ರವಾಗಿದೆ. ಧರ್ಮಗಳು ನಮ್ಮನ್ನು ಒಂದುಗೂಡಿಸುವ ಬದಲು ಪ್ರತ್ಯೇಕಗೊಳಿಸುತ್ತಿದೆ. 'ಬಡಿದಾಡುವ ಧರ್ಮ, ಧರ್ಮವೇ ಅಲ್ಲ' ಎಂದು ಕವಿ ಬೇಂದ್ರೆಯವರು ಹೇಳಿದ್ದಾರೆ. ಯಾವ ಧರ್ಮವೂ ಮೇಲಲ್ಲ ಯಾವ ಧರ್ಮವೂ ಕೀಳಲ್ಲ ಒಂದು ಧರ್ಮದಲ್ಲಿ ಕೊರತೆ, ನ್ಯೂನ್ಯತೆಗಳು ಕಂಡುಬಂದಾಗ ಇನ್ನೊಂದು ಧರ್ಮದ ಹುಟ್ಟು ಆಗುತ್ತದೆ. ಯಾವ ಧರ್ಮವೂ ಪರಿಪೂರ್ಣವಲ್ಲ ಎಂದು ಅರವಿಂದರು ಹೇಳುತ್ತಾರೆ. ಈ ತಿಳುವಳಿಕೆ ಎಲ್ಲ ಧರ್ಮೀಯರಿಗೆ ಉಂಟಾದರೆ ಧರ್ಮದ ಹೆಸರಿನಲ್ಲಿ ನಡೆಯುವ ಘರ್ಷಣೆಗಳು ತಪ್ಪುತ್ತವೆ.

ಜಾತಿಗಳು –ಚಾತುರ್ವರ್ಣ–ಹುಟ್ಟಿ ಸಮಾಜವನ್ನು ಒಡೆಯಿತು. ಜಾತಿಗಳಲ್ಲಿ ಉಪಜಾತಿಗಳು ಹುಟ್ಟಿಕೊಂಡುದರ ಪರಿಣಾಮವಾಗಿ ಸಮಾಜ ಹೊಳು ಹೋಳಾಗಿ ಒಡೆದುಕೊಂಡಿತು. ರಾಜಕೀಯ ಪಕ್ಷಗಳು ಇದರ ದುರ್ಲಾಭ ಪಡೆಯುತ್ತಿವೆ.

ರಾಜಕೀಯದಲ್ಲಿ ಜಾತಿ ಧರ್ಮಗಳ ಪ್ರವೇಶವಾಗಿದೆ. ಭಾರತ ಜಾತ್ಯಾತೀತರಾಷ್ಟ್ರವಾಗಬೇಕು ಎಂದು ರಾಜ್ಯಾಂಗ ರಚನಕಾರರು ಆಶಿಸಿದ್ದರು. ಈಗ ಜಾತಿಯತೆಯನ್ನು, ಮತಿಯತೆಯನ್ನು ಬಳಸಿಕೊಂಡು ಕುರ್ಚಿ ಹಿಡಿಯುವ ಸ್ಪರ್ಧೆ ನಡೆದಿದೆ. ಭಾರತೀಯ ಜನತಾಪಕ್ಷ ಹಸಿ ಹಸಿಯಾಗಿ ಜಾತೀಯತೆ ಮತ್ತು ಮತೀಯತೆಯನ್ನು ದುರ್ಬಳಕೆ ಮಾಡಿದರೆ ಇತರ ರಾಜಕೀಯ ಪಕ್ಷಗಳು ತಾವು ಜಾತ್ಯತೀತ ಸಿದ್ಧಾಂತವನ್ನು ನಂಬಿದವರು ಎಂದು ಹೇಳಿಕೊಂಡು ಜಾತಿಧರ್ಮಗಳ ಕೀಳುರಾಜಕೀಯದಲ್ಲಿ ತೊಡಗಿರುವುದು ಎಲ್ಲರಿಗೂ ತಿಳಿದಿರುವ ವಿಷಯ.

೧) ಜಾತಿಧರ್ಮಗಳ ಹೆಸರಿನಲ್ಲಿ ರಾಜಕೀಯ ಪಕ್ಷಗಳನ್ನು ರಚಿಸುವುದೂ ಜಾತಿ ಧರ್ಮದ ಹೆಸರಿನಲ್ಲಿ ಮತಯಾಚಿಸುವುದೂ ಅಪರಾಧ ಎಂದು ಘೋಷಿಸಬೇಕು.

೨) ರಾಜ್ಯಾಂಗ ತಿದ್ದುಪಡಿ ಮಾಡುವ ಮೂಲಕ ಜಾತಿ ರಾಜಕೀಯ ಸಂಸ್ಥೆಗಳನ್ನು ರಚಿಸುವುದನ್ನು ನಿಷೇಧಿಸುವ ಕಾಯ್ದೆಯಾಗಬೇಕು.

೩) ಅಕಾಲಿದಲ್, ಮುಸ್ಲಿಂಲೀಗ್, ಹಿಂದುಮಹಾಸಭೆ, ಭಾರತೀಯ ಜನತಾಪಕ್ಷ ಮುಂತಾದ ಜಾತಿಧರ್ಮಗಳ ಹೆಸರಿನಲ್ಲಿ ರಾಜಕೀಯ ಪಕ್ಷಗಳನ್ನು ರಚಿಸುವುದನ್ನು ಹಾಗೂ ಚುನಾವಣಾ ಕಣಕ್ಕೆ ಇಳಿಯುವುದನ್ನು ನಿಷೇಧಿಸಬೇಕು.

ಧರ್ಮ ಅಥವಾ ಜಾತಿಯ ಆಧಾರದ ಮೇಲೆ ಸರ್ಕಾರಗಳನ್ನು ನಡೆಸುವ ಪಾಕಿಸ್ತಾನ, ಇರಾನ್ ಮುಂತಾದ ರಾಷ್ಟ್ರಗಳಲ್ಲಿ ಜಾತಿಯ ಆಧಾರದ ಮೇಲೆ ರಾಜಕೀಯ ಪಕ್ಷಗಳನ್ನು ಕಟ್ಟುವುದೂ, ಮತಯಾಚಿಸುವುದೂ ಸರಿಯಿರಬಹುದು ಆದರೆ ಜಾತ್ಯಾತೀತತೆ ಆಧಾರದಮೇಲೆ, ರಾಜ್ಯಾಂಗದರೀತ್ಯಾ ರಾಜಕೀಯ ನಡೆಯಬೇಕಾಗಿರುವ ಭಾರತದಲ್ಲಿ ಧರ್ಮ ಅಥವಾ ಜಾತಿಯಾಧಾರಿತ ರಾಜಕೀಯ ಸಂಸ್ಥೆಗಳ ರಚನೆಗೆ, ಜಾತಿರಾಜಕೀಯಕ್ಕೆ

ಅವಕಾಶವೇ ಇರಬಾರದು.

ರಾಜಕೀಯದಲ್ಲಿ ಮತಧರ್ಮಗಳನ್ನು ಬೆರೆಸುವುದು ನ್ಯಾಯಬಾಹಿರ. ಎಲ್ಲ ಮತದವರನ್ನೂ ಎಲ್ಲ ಧರ್ಮದವರನ್ನೂ ಸರ್ಕಾರ, ಸಮಾನಾಂತರದಲ್ಲಿ ದೂರವಿಡಬೇಕು. ಯಾವ ಒಂದು ಮತ ಅಥವಾ ಧರ್ಮವನ್ನು ಎತ್ತಿ ಹಿಡಿಯುವುದು ಮತ್ತೊಂದನ್ನು ದ್ವೇಷಿಸುವುದು ಸಲ್ಲ. ಓಟಿನ ಆಸೆಗಾಗಿ ರಾಜಕೀಯ ಪಕ್ಷಗಳು ಜಾತೀಯತೆಯೊಡನೆ ಚೆಲ್ಲಾಟವಾಡುತ್ತಿದೆ. ಈ ಪ್ರವೃತ್ತಿಯನ್ನು ಅಂತ್ಯಗೊಳಿಸುವ ಶಾಸನರಚನೆಯಾಗಬೇಕು.

ರಾಜಕೀಯ ಕಲುಷಿತಗೊಂಡಿದೆ. spiritualise politics ಎಂದು ಗಾಂಧೀಜಿ, ತಿಲಕ್ ಹೇಳಿದರು. ಆದರೆ ಇಂದು Criminalisation of Politics ಆಗುತ್ತಿದೆ. ಶಾಸಕರು, ಪಾರ್ಲಿಮೆಂಟ್ ಸದಸ್ಯರು, ಮಂತ್ರಿಗಳು ಪ್ರಜಾಸೇವಕರಂತೆ ವರ್ತಿಸಬೇಕು ಜನತೆಯ ಸೇವೆಗೆ ಈ ಅಧಿಕಾರಗಳು ಒಂದು ಅವಕಾಶ ಎಂದು ಗಾಂಧೀಜಿ ಹೇಳಿದ್ದರು ಆದರೆ ಇಂದು ರಾಜಕೀಯ ಕಲುಷಿತಗೊಂಡಿದೆ. ಕುರ್ಚಿಹಿಡಿಯುವ ರಾಜಕೀಯ ಇದಾಗಿದೆ. ಮೌಲ್ಯಾಧಾರಿತ ರಾಜಕೀಯ ನಡೆಸುತ್ತೇವೆಂದವರೇ ಭ್ರಷ್ಟ ರಾಜಕೀಯದಲ್ಲಿ ತೊಡಗಿದರು. ಇನ್ನು Opportunistic politics ನಲ್ಲಿ ತೊಡಗಿರುವವರ ವಿಚಾರದಲ್ಲಿ ಹೇಳುವುದೇನಿದೆ? ಎಲ್ಲ ರಾಜಕೀಯ ಪಕ್ಷಗಳಿಗೂ ಸ್ವಾತಂತ್ರ್ಯಪೂರ್ವದಲ್ಲಿ ಒಂದು Ideology ಇತ್ತು. ಈಗ ಅಧಿಕಾರ ಹಿಡಿಯುವುದೇ ಕಮ್ಯುನಿಸ್ಟ್ ಪಕ್ಷ ಮೊದಲುಗೊಂಡು ಎಲ್ಲ ರಾಜಕೀಯ ಪಕ್ಷಗಳ ಆದರ್ಶವಾಗಿದೆ. ಈಗಲಂತೂ ಭಾರತದಲ್ಲಿ ಬಂಡವಾಳಷಾಹಿ ಪದ್ಧತಿ ಜಾರಿಗೆ ತರುವ ತರಾತುರಿಯಲ್ಲಿದ್ದಾರೆ ಮನಮೋಹನ ಸಿಂಗರು. ಜಾಗತೀಕರಣ, ಉದಾರೀಕರಣ ನೀತಿಯ ಹೆಸರಿನಲ್ಲಿ ಎಲ್ಲ ಉದ್ಯಮಗಳನ್ನು ಖಾಸಗೀಕರಣಗೊಳಿಸುವ ಪ್ರಕ್ರಿಯೆ ಆರಂಭವಾಗಿವೆ. ಸರ್ಕಾರ ಬಂಡವಾಳದ ಅಭಾವದ ಕಾರಣ ತೋರಿಸಿ, ಬಂಡವಾಳಶಾಹಿಗಳ ಕೈಗೆ ಎಲ್ಲ ಉದ್ಯಮಗಳನ್ನೂ ಎಲ್ಲ ಯೋಜನೆಗಳನ್ನು ಹಸ್ತಾಂತರಿಸುವ ಸಂಕಲ್ಪಮಾಡಿದೆ. ಈ ಮೂಲಕ ಜನಸಾಮಾನ್ಯರನ್ನು ಈ ಪಟ್ಟಭದ್ರರ ಗುಲಾಮರಾಗಿಸುವ ಪ್ರಯತ್ನ ನಡೆದಿದೆ.

ಕಾರ್ಗಿಲ್, ಮಾನ್‌ಸಾಂಟೋ ಕಂಪನಿಗಳು ಬೀಜದ ಕಾಳಿಗಾಗಿ ನಮ್ಮ ರೈತರನ್ನು ಗುಲಾಮರನ್ನಾಗಿ ಮಾಡಿಕೊಳ್ಳುವ ಹುನ್ನಾರ ನಡೆಸಿವೆ.

ಸರ್ಕಾರವು ದುರ್ವ್ಯಸನಗಳಾದ ಕುಡಿತ, ಜೂಜು, ಲಾಟರಿ, ಕ್ಯಾಬರೆ ಮುಂತಾದವನ್ನು ಪ್ರೋತ್ಸಾಹಿಸುತ್ತಿದೆ ಅಥವಾ ತಾನೇ ನಡೆಸುತ್ತಿದೆ. ಇದರಿಂದ ಸಮಾಜದಲ್ಲಿ ಅನೀತಿ, ಅನಾಚಾರ, ಬಡತನ, ದರೋಡೆ, ಖೂನಿಗಳು ಹೆಚ್ಚುತ್ತಿರುವುದನ್ನು ತಿಳಿದೂ ಈ ದುರ್ವ್ಯಸನಗಳನ್ನು ವ್ಯವಸ್ಥಿತವಾಗಿ ಖಾಯಂಗೊಳಿಸುವ ಹಾಗೂ ಬೆಳೆಸುವ ಕಾರ್ಯದಲ್ಲಿ ಸರ್ಕಾರಗಳು ತೊಡಗಿವೆ.

ಜನತೆ ಈ ಅನಾಹುತಗಳನ್ನು ಮನಗಂಡು, ಸಂಘಟಿತರಾಗಿ ವ್ಯಸನ ಮುಕ್ತ ಸಮಾಜರಚನೆಗಾಗಿ ಹೋರಾಡಬೇಕಾಗಿದೆ. ಸರ್ಕಾರ ತಾನಾಗಿಯೇ ಈ ದುರ್ವ್ಯಸನಗಳನ್ನು ಕೊನೆಗಾಣಿಸುವುದೆಂದು ಯಾರೂ ತಿಳಿಯಬಾರದು.

ರಾಜಕೀಯವಾಗಿ ಇನ್ನೂ ಎಷ್ಟೋ ಸುಧಾರಣೆಗಳಾಗಬೇಕಾದ್ದಿದೆ. ಅದರ ಪ್ರಸ್ತಾಪವನ್ನು ಮುಂದಿನ ಲೇಖನದಲ್ಲಿ ಮಾಡಲಾಗುತ್ತದೆ.

***

ವಿಜ್ಞಾನ, ತಂತ್ರಜ್ಞಾನ ಹಾಗೂ ದೇಶದ ಆರ್ಥಿಕ ಬೆಳವಣಿಗೆ

–ಪ್ರೊ.ಕೆ. ಶ್ರೀನಿವಾಸನ್

ಇತ್ತೀಚಿನ ಎರಡು ಮೂರು ವರ್ಷಗಳಲ್ಲಿ ನಮ್ಮ ದೇಶದ ಆರ್ಥಿಕ ಬೆಳವಣಿಗೆ ಮತ್ತು ಮುನ್ನಡೆ ಸ್ಥಗಿತಗೊಂಡು ದೇಶವು ತೀವ್ರ ಬಿಕ್ಕಟ್ಟಿನ ಪರಿಸ್ಥಿತಿಗೆ ಒಳಗಾಗಿರುವುದು ಸರ್ವವಿದಿತ ವಿಷಯವೇ ಆಗಿದೆ. ಈ ಬಿಕ್ಕಟ್ಟಿನ ಪರಿಸ್ಥಿತಿಯ ಕಾರಣದಿಂದಾಗಿ ದೇಶದ ಕೆಲವು ವೈಚಾರಿಕ ವಲಯಗಳಲ್ಲಿ, ನಮ್ಮ ದೇಶದ ಆರ್ಥಿಕ ಬೆಳವಣಿಗೆಯ ಬಗ್ಗೆ, ಅದರಲ್ಲೂ ಈ ಬೆಳವಣಿಗೆಯಲ್ಲಿ ವಿಜ್ಞಾನ ಮತ್ತು ಟೆಕ್ನಾಲಜಿಗಳ ಪಾತ್ರ, ವಿಜ್ಞಾನ ಮತ್ತು ಟೆಕ್ನಾಲಜಿಗಳಿಗೂ ಆರ್ಥಿಕ ಮತ್ತು ಸಾಮಾಜಿಕ ವ್ಯವಸ್ಥೆಗೂ ಇರುವ ಮತ್ತು ಇರಬೇಕಾದ ಸಂಬಂಧ, ದೇಶದ ಆರ್ಥಿಕ ಬೆಳವಣಿಗೆಯಲ್ಲಿ ವಿಜ್ಞಾನ ಮತ್ತು ಟೆಕ್ನಾಲಜಿಗಳು ತಮ್ಮ ಪಾತ್ರವನ್ನು ಯಶಸ್ವಿಯಾಗಿ ನಿರ್ವಹಿಸಿ ಅವು ಪೂರ್ಣಪ್ರಮಾಣದಲ್ಲಿ ಫಲದಾಯಕವಾಗಬೇಕಾದರೆ ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆ ಯಾವ ರೀತಿ ಇರಬೇಕು ಇತ್ಯಾದಿ ವಿಷಯಗಳ ಬಗ್ಗೆ, ಗಂಭೀರ ಚರ್ಚೆಗಳು ಜರುಗಿ ಹಲವು ಉಪಯುಕ್ತ ತೀರ್ಮಾನಗಳು ಹೊರಬಿದ್ದಿವೆ. ಪ್ರಸ್ತುತ ಲೇಖನದಲ್ಲಿ ಇದೇ ವಿಷಯಗಳ ಬಗ್ಗೆ ಬೇರೊಂದು ರೀತಿಯ ವಿಶ್ಲೇಷಣೆಯನ್ನು ಕೈಗೊಳ್ಳಲಾಗಿದೆ.

ಇತ್ತೀಚಿನ ಬಿಕ್ಕಟ್ಟು, ಕೆಲವರು ಭಾವಿಸಿರುವಂತೆ, ಏಕಾಏಕಿ ಉದ್ಭವಿಸಿರುವ ದಿಢೀರ್ ಬೆಳವಣಿಗೆಯೇನೂ ಅಲ್ಲ. ಸ್ವಾತಂತ್ರ್ಯಾನಂತರದ ೪೭ ವರ್ಷಗಳಲ್ಲಿ ಸಾಗಿ ಬಂದ ಸಾಮಾಜಿಕ ಮತ್ತು ಆರ್ಥಿಕ ಬೆಳವಣಿಗೆಯನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ, ಈ ಕಾಲದಲ್ಲಿ ಆರ್ಥಿಕ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ನಾವು ಅನುಸರಿಸಿಕೊಂಡು ಬಂದ ನೀತಿ ಮತ್ತು ಧೋರಣೆಗಳು, ಇವುಗಳ ಚೌಕಟ್ಟಿನಲ್ಲಿ ರೂಪಿತವಾದ ಪಂಚವಾರ್ಷಿಕ ಯೋಜನೆಗಳು, ಅವುಗಳನ್ನು ಕಾರ್ಯಗತಗೊಳಿಸಿದ ರೀತಿ–ಇವುಗಳ ಅಂತಿಮ ಫಲವಾಗಿಯೇ ಈ ಬಿಕ್ಕಟ್ಟು ಉದ್ಭವಿಸಿರುವುದು ಎಂಬ ಅಂಶ ನಮಗೆ ಮನವರಿಕೆಯಾಗದಿರದು. ದೇಶದ ಆರ್ಥಿಕ ಪ್ರಗತಿಯಲ್ಲಿ ವಿಜ್ಞಾನ ಮತ್ತು ಟೆಕ್ನಾಲಜಿಗಳ ಪಾತ್ರವೂ ಕೂಡ ಹೆಚ್ಚು ಫಲದಾಯಕವಾಗದೆ ನಿಷ್ಪ್ರಯೋಜಕವಾಗಿರುವುದೂ ಇದೇ ಕಾರಣದಿಂದಲೆ ಎಂಬುದೂ ಸ್ಪಷ್ಟವಾಗುತ್ತದೆ.

೧೯೪೭ನೇ ಆಗಸ್ಟ್ ೧೫ ರಂದು ನಮ್ಮ ರಾಷ್ಟ್ರದ ಇತಿಹಾಸದಲ್ಲಿ ಹೊಸದೊಂದು ಜೀವನ ಪ್ರಾರಂಭವಾಯಿತು. ಪರದಾಸ್ಯದಿಂದ ವಿಮುಕ್ತವಾದ ತರುಣದಲ್ಲಿ ರಾಷ್ಟ್ರವು ಸಹಜವಾಗಿಯೇ ಸ್ವಾತಂತ್ರ್ಯಹೋರಾಟದ ದಿನಗಳಲ್ಲಿ ಸ್ಫೂರ್ತಿದಾಯಕವಾಗಿದ್ದ ಆಶೆ–ಆಕಾಂಕ್ಷೆಗಳಿಂದ ಮಿಡಿಯುತ್ತಿದ್ದು, ಅವುಗಳನ್ನು ಕಾರ್ಯಗತಗೊಳಿಸಿ ಅರ್ಥಪೂರ್ಣವಾದ ತನ್ನದೇ ಆದ ಹೊಸ ಜೀವನವೊಂದನ್ನು ರೂಪಿಸಿಕೊಳ್ಳಲು ಹಾತೊರೆಯುತ್ತಿತ್ತು. ರಾಷ್ಟ್ರದ ಈ ಆಶೆ ಆಕಾಂಕ್ಷೆಗಳಿಗೆ ನಿರ್ದಿಷ್ಟ ರೂಪವನ್ನು ಕೊಟ್ಟು, ಅಲ್ಲಿವರೆಗೂ ಸುಪ್ತವಾಗಿದ್ದು, ಸ್ವಾತಂತ್ರ್ಯದ ಫಲವಾಗಿ ಮುಕ್ತವಾದ ಜನರ ಅಪಾರ ಉತ್ಸಾಹ ಮತ್ತು ಶಕ್ತಿಗಳೆಲ್ಲವನ್ನೂ ಸಾರ್ಥಕ ರೀತಿಯಲಿ ನಿಯೋಜಿಸಿ ರಾಷ್ಟ್ರವು ಪ್ರಗತಿಶೀಲ ಹಾದಿಯಲ್ಲಿ ಸುವ್ಯವಸ್ಥಿತವಾಗಿ ಮುಂದುವರಿಯುವಂತೆ ಮಾಡುವುದು ರಾಷ್ಟ್ರದ ನಾಯಕರ ಪ್ರಥಮ ಕೆಲಸವಾಯಿತು.

ಈ ದಿಕ್ಕಿನಲ್ಲಿ ಮೊದಲ ಹೆಜ್ಜೆಯೆಂದರೆ ನಮ್ಮ ಸಂವಿಧಾನ. ನಮ್ಮ ಸಂವಿಧಾನ

ಅನೇಕ ರೀತಿಯಲ್ಲಿ ಬಹು ಮಹತ್ವದೆನ್ನುವುದರಲ್ಲಿ ಸಂದೇಹವಿಲ್ಲ; ಆದರೆ ರಾಷ್ಟ್ರೋತ್ಥಾನದ ದೃಷ್ಟಿಯಿಂದ ಅವಶ್ಯವಾದ ಪ್ರಗತಿದಾಯಕ ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆಯನ್ನು ನಿರ್ಮಿಸುವಲ್ಲಿ ಸಂವಿಧಾನ ವಿಶಾಲ ಚೌಕಟ್ಟೊಂದನ್ನು ಒದಗಿಸಿತೇ ಹೊರತು, ಈ ದಿಕ್ಕಿನಲ್ಲಿ ಯಾವ ನಿರ್ದಿಷ್ಟ ಕ್ರಮವನ್ನಾಗಲಿ ಅಥವಾ ಸೂತ್ರವನ್ನಾಗಲಿ ಒದಗಿಸಲು ಅಶಕ್ಯವಾಗಿತ್ತು. ಆದ್ದರಿಂದ ಸಂವಿಧಾನದ ಚೌಕಟ್ಟಿನಲ್ಲಿ ಹೆಚ್ಚು ನಿರ್ದಿಷ್ಟವಾದ ಹಾಗೂ ವ್ಯಾಪಕವಾದ ಆರ್ಥಿಕ ಯೋಜನೆಗಳನ್ನು ರೂಪಿಸುವುದು ಅವಶ್ಯವಾಯಿತು. ಈ ದಿಕ್ಕಿನಲ್ಲಿ ಕೈಗೊಂಡ ಪ್ರಯತ್ನಗಳ ಫಲವೇ ಸಾಮಾಜಿಕ ಹಾಗೂ ಆರ್ಥಿಕ ಕ್ಷೇತ್ರಗಳಲ್ಲಿ ನಾವು ೧೯೫೧ರಿಂದ ಕಾರ್ಯಗತಗೊಳಿಸಿಕೊಂಡು ಬಂದಿರುವ ಪಂಚವಾರ್ಷಿಕ ಯೋಜನೆಗಳು. ಯೋಜನೆಗಳ ಮೂಲ ಉದ್ದೇಶವೆಂದರೆ ದೇಶದ ಎಲ್ಲ ರೀತಿಯ ಸಂಪತ್‌ಸಾಧನಗಳನ್ನು ಪೂರ್ವಭಾವಿಯಾಗಿ ನಿಯೋಜಿತ ರೀತಿಯಲ್ಲಿ ಬಳಸಿಕೊಂಡು ದೇಶದ ಸಾಮಾಜಿಕ ಮತ್ತು ಆರ್ಥಿಕ ಪ್ರಗತಿಯನ್ನು ಸಾಧಿಸುವುದು.

೧೯೫೧ರಿಂದ ಮುಂದುವರಿಸಿಕೊಂಡು ಬಂದಿರುವ ಸಾಮಾಜಿಕ ಮತ್ತು ಆರ್ಥಿಕ ಪ್ರಯತ್ನಗಳ ಮುಖ್ಯ ಗುರಿ ಎರಡು ರೀತಿಯದಾಗಿತ್ತು ಎನ್ನಬಹುದು. ಮೊದಲನೆಯದಾಗಿ ತ್ವರಿತಗತಿಯಲ್ಲಿ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಿ ದೇಶದ ಪ್ರತಿಯೊಬ್ಬ ಸಾಮಾನ್ಯ ಪ್ರಜೆಯೂ ಸಂತುಷ್ಟವಾಗಿ ಜೀವಿಸಲು ಅವಶ್ಯವಾದ ಸೌಲಭ್ಯಗಳನ್ನು ಒದಗಿಸಿ ಅವನ ಜೀವನ ಮಟ್ಟವನ್ನು ಹೆಚ್ಚಿಸುವುದು. ಅಂದರೆ ತ್ವರಿತ ಆರ್ಥಿಕ ಅಭಿವೃದ್ಧಿ ಮತ್ತು ಅದರೊಂದಿಗೇ ದೇಶದ ಸಂಪತ್ತಿನ ಸಮತಾಶೀಲ ವಿತರಣೆ, ಅಭಿವೃದ್ಧಿ ಕಾರ್ಯಾಚರಣೆಗಳ ಪ್ರಧಾನ ಗುರಿಗಳಲ್ಲೊಂದು ಎಂದು ಭಾವಿಸಲಾಯಿತು. ಎರಡನೆಯದಾಗಿ ಅಭಿವೃದ್ಧಿಕಾರ್ಯಾಚರಣೆಗಳು ಕ್ರಮೇಣ ಉತ್ಕರ್ಷಿತಗೊಂಡು ಮುಂದುವರಿದಂತೆ ಜನರ ಸೃಜನಶೀಲ ಶಕ್ತಿ ವಿಕಸನಗೊಂಡು ಕಲೆ, ಸಾಹಿತ್ಯ, ವಿಜ್ಞಾನ, ಟೆಕ್ನಾಲಜಿ ಇತ್ಯಾದಿ ಕ್ಷೇತ್ರಗಳಲ್ಲಿ ಮೂರ್ತರೂಪದಲ್ಲಿ ಅಭಿವ್ಯಕ್ತಗೊಳ್ಳಲು ಅನುವಾಗುವ ಸಾಂಸ್ಕೃತಿಕ ಪರಿಸರವೊಂದು ರೂಪುಗೊಳ್ಳಲು ಈ ಕಾರ್ಯಾಚರಣೆಗಳು ಸಹಾಯಕಾರಿಯಾಗುವುವೆಂದೂ ನಿರೀಕ್ಷಿಸಲಾಯಿತು. ಅಲ್ಲದೆ ಈ ಹೊಸ ಸಾಂಸ್ಕೃತಿಕ ಪರಿಸರದಲ್ಲಿ ವಿಜ್ಞಾನ ಮತ್ತು ಟೆಕ್ನಾಲಜಿಗಳ ಪಾತ್ರ ಮತ್ತು ಪ್ರಭಾವ ವ್ಯಾಪಕವಾಗಿ ಹರಡಿ ನಮ್ಮ ಸಂಪ್ರದಾಯಬದ್ಧ ಸಮಾಜ ಕ್ರಮೇಣ ಬದಲಾಗಿ ಅದು ವಿಜ್ಞಾನಪ್ರಧಾನವಾದ ಒಂದು ಆಧುನಿಕ ಸಮಾಜವಾಗಿ ಪರಿವರ್ತಿತವಾಗುವುದೆಂಬ ಆಶಯವನ್ನೂ ವ್ಯಕ್ತಪಡಿಸಲಾಗಿತ್ತು.

ಅಭಿವೃದ್ಧಿ ಕಾರ್ಯಗಳ ಕೇಂದ್ರ ಗುರಿಯ ಈ ಸ್ಥೂಲ ಚಿತ್ರಣವನ್ನು ಗಮನದಲ್ಲಿಟ್ಟುಕೊಂಡು, ಈ ಗುರಿಯ ಸಾಧನೆಯಲ್ಲಿ ವಿಜ್ಞಾನ ಮತ್ತು ಟೆಕ್ನಾಲಜಿಗಳಿಗೆ ವಹಿಸಿದ ನಿರ್ದಿಷ್ಟ ಪಾತ್ರ, ಈ ಪಾತ್ರದ ಸಮರ್ಥ ನಿರ್ವಹಣೆಯ ದೃಷ್ಟಿಯಿಂದ ಕೈಗೊಂಡ ಶಿಕ್ಷಣ ಸುಧಾರಣೆ ಮತ್ತು ವಿಸ್ತರಣೆ ಇವುಗಳನ್ನು ಗಮನಿಸೋಣ. ಮುಂದುವರಿದ ಪಾಶ್ಚಾತ್ಯ ರಾಷ್ಟ್ರಗಳ ಬೆಳವಣಿಗೆಯನ್ನು ಗಮನಿಸಿದಾಗ, ಈ ರಾಷ್ಟ್ರಗಳು ವಿಶೇಷ ಪ್ರಮಾಣದಲ್ಲಿ ಸಂಪತ್ತನ್ನು ಪಡೆದುಕೊಂಡು ಸರ್ವತೋಮುಖ ಸಮೃದ್ಧ ಸ್ಥಿತಿಯನ್ನು ತಲುಪಿ ಅದೇ ಸ್ಥಿತಿಯಲ್ಲಿ ಮುಂದುವರಿಯುತ್ತಿರುವುದಕ್ಕೆ ಕೆಲವು ಐತಿಹಾಸಿಕ ಕಾರಣಗಳೇ ಅಲ್ಲದೇ, ವಿಜ್ಞಾನ ಮತ್ತು ಟೆಕ್ನಾಲಜಿಗಳ ಅದ್ಭುತ ಸಾಧನೆಗಳೂ ಕಾರಣವೆಂಬುದು ಅರಿವಾಗುತ್ತದೆ. ರಷ್ಯಾ ದೇಶವು ಕೂಡ ಇತ್ತೀಚೆಗೆ ಬಹುಮಟ್ಟಿಗೆ ಮುಂದುವರಿದಿರುವುದು ವಿಜ್ಞಾನ ಮತ್ತು ಟೆಕ್ನಾಲಜಿಗಳ ಬಳಕೆಯಿಂದಾಗಿಯೇ ಎಂದು ಹೇಳಬಹುದು. ಈ ಬೆಳವಣಿಗೆಯನ್ನೆಲ್ಲಾ

ಗಮನಿಸಿ ನಮ್ಮ ದೇಶದ ತ್ವರಿತ ಅಭಿವೃದ್ಧಿ ಕಾರ್ಯಾಚರಣೆಗಳಲ್ಲಿಯೂ ಸಹ ವಿಜ್ಞಾನ ಮತ್ತು ಟೆಕ್ನಾಲಜಿಗಳಿಗೆ ಕೇಂದ್ರ ಪಾತ್ರವನ್ನೇ ನಿರ್ದೇಶಿಸಲಾಯಿತು. ವಿಜ್ಞಾನ ಮತ್ತು ಟೆಕ್ನಾಲಜಿಗಳು ನಮ್ಮ ದೇಶದಲ್ಲಿ ಅಂದು ಅಸ್ತಿತ್ವದಲ್ಲಿದ್ದ ಹಿಂದುಳಿದ ಆರ್ಥಿಕ ವ್ಯವಸ್ಥೆಯನ್ನು ತೀವ್ರ ರೀತಿಯಲ್ಲಿ ಮಾರ್ಪಡಿಸಿ ನವೀಕರಿಸುವುದರಲ್ಲಿ, ಅಲ್ಲದೆ ಇದಕ್ಕೂ ಮುಖ್ಯವಾಗಿ ಅನೇಕಾನೇಕ ಹೊಸ ಉತ್ಪನ್ನ ಕಾರಕ ಸ್ಥಾವರಗಳ ಸ್ಥಾಪನೆಯಲ್ಲಿ ಅನುವಾಗಿ ಆರ್ಥಿಕ ವಿಸ್ತರಣೆಯನ್ನು ಸಾಧಿಸುವಲ್ಲಿ ಅತಿ ದಕ್ಷ ಸಾಧನಗಳಾಗಬೇಕೆಂದು ನಿರೀಕ್ಷಿಸಲಾಯಿತು. 'ನವೀಕೃತ' ಹಾಗೂ ಹೊಸದಾಗಿ ಸ್ಥಾಪಿತವಾದ ಕೈಗಾರಿಕಾ ಸ್ಥಾವರಗಳಾದರೋ ವೈಜ್ಞಾನಿಕವಾಗಿ ಮುಂದುವರೆದಿರುವ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಬಳಕೆಯಲ್ಲಿರುವ ಅತ್ಯಾಧುನಿಕ ಟೆಕ್ನಾಲಜಿ ವಿಧಾನಗಳನ್ನು ಆಧರಿಸಿ ಉತ್ಪನ್ನ ವಿಧಾನಗಳನ್ನೇ ರೂಢಿಸಿಕೊಳ್ಳುವಂತೆ ಅವುಗಳನ್ನು ನಿಯೋಜಿಸಲು ನಿರ್ಧರಿಸಲಾಯಿತು. ಆಧುನಿಕ ಉತ್ಪನ್ನ ವಿಧಾನಗಳನ್ನಾಧರಿಸಿದ ಮೂಲ ಮತ್ತು ಪ್ರಾಥಮಿಕ ಕೈಗಾರಿಕಾ ಸ್ಥಾವರಗಳ ಸ್ಥಾಪನೆ ಆರ್ಥಿಕ ಮುನ್ನೆಡೆಯ ಅತ್ಯಗತ್ಯ ಮೊದಲ ಹೆಜ್ಜೆ ಎಂದು ಭಾವಿಸಿ, ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಈ ಕೈಗಾರಿಕಾ ಸ್ಥಾವರಗಳ ಸ್ಥಾಪನೆಗೆ ಆದ್ಯತೆ ನೀಡಲಾಯಿತು. ಈ ರೀತಿಯ ಮೂಲ ಮತ್ತು ಪ್ರಾಥಮಿಕ ಸ್ಥಾವರಗಳನ್ನವಲಂಬಿಸಿ ಅವುಗಳಿಂದ ಪೋಷಿತಗೊಂಡ ಇತರ ಕೈಗಾರಿಕೆ ಮತ್ತು ಕೃಷಿ ಕ್ಷೇತ್ರಗಳ ಅಭಿವೃದ್ಧಿಶೀಲ ಬೆಳವಣಿಗೆಯೇ ನಮ್ಮ ದೇಶಕ್ಕೆ ಅತಿ ಸಂಗತವಾದ ಅಭಿವೃದ್ಧಿ ಮಾದರಿಯೆಂಬ ಭಾವನೆ ಪ್ರಬಲವಾಗಿ ರೂಢವಾಯಿತು, ಯಾವ ಅರ್ಥದಲ್ಲಿ 'ನವೀಕರಣ' ಭಾವನೆಯನ್ನು ಪಾಶ್ಚಾತ್ಯ ದೇಶಗಳಲ್ಲಿ ಅನ್ವಯಿಸಲಾಗಿದೆಯೋ ಅದೇ ಅರ್ಥದಲ್ಲಿಯೇ ನಮ್ಮಲ್ಲೂ ಅನ್ವಯಿಸಬೇಕು. ಹೀಗಾದಲ್ಲಿ ಮಾತ್ರ ವಿಜ್ಞಾನ ಮತ್ತು ಟೆಕ್ನಾಲಜಿಗಳು ಅತಿ ಹೆಚ್ಚು ಪ್ರಯೋಜನಕಾರಿಯಾದಾವು ಎಂಬ ಅಭಿಪ್ರಾಯ ಆರ್ಥಿಕ, ರಾಜಕೀಯ, ವಿಜ್ಞಾನ ಮತ್ತು ಟೆಕ್ನಾಲಜಿ ವಲಯಗಳಲ್ಲಿ ಅನೇಕ ಜನರ ಮನಸ್ಸಿನಲ್ಲಿ ಪ್ರಬಲವಾಗಿ ಮೂಡಿ ಅವರು ನವೀಕರಣ ದಿಕ್ಕಿನಲ್ಲಿ ಕಾರ್ಯೋನ್ಮುಖರಾದರು.

ಈ ರೀತಿಯ ನವೀಕರಣವನ್ನು ಕಾರ್ಯತಃ ಸಾಧಿಸಬೇಕಾದರೆ ಸಾಕಷ್ಟು ಪ್ರಮಾಣದಲ್ಲಿ ಅತಿ ಹೆಚ್ಚಿನ ಮಟ್ಟದ ನೈಪುಣ್ಯತೆಯನ್ನು ಪಡೆದಿರುವ ವಿಜ್ಞಾನ ಮತ್ತು ಟೆಕ್ನಾಲಜಿ ತಜ್ಞರನ್ನೂ ತರಪೇತು ಮಾಡುವುದು ಅಗತ್ಯವಾದ ಕಾರಣ, ಈ ದಿಕ್ಕಿನಲ್ಲಿ ಅನೇಕ ಕ್ರಮಗಳನ್ನೂ ಕೈಗೊಳ್ಳಲಾಯಿತು. ವಿಜ್ಞಾನ ಮತ್ತು ಟೆಕ್ನಾಲಜಿ ಶಿಕ್ಷಣವನ್ನು ವೈವಿಧ್ಯೀಕರಿಸಲಾಯಿತು. ಪ್ರೌಢಮಟ್ಟದ ಪರಿಣತೆಯುಳ್ಳ ವಿಜ್ಞಾನ ಮತ್ತು ಟೆಕ್ನಾಲಜಿ ತಜ್ಞರನ್ನೂ ಸಾಕಷ್ಟು ಪ್ರಮಾಣದಲ್ಲಿ ಒದಗಿಸಿಕೊಳ್ಳುವ ಸಲುವಾಗಿ ದೇಶದಲ್ಲಿ ಉನ್ನತ ಟೆಕ್ನಾಲಜಿ ಶಿಕ್ಷಣ ಸಂಸ್ಥೆಗಳನ್ನು ಹಾಗೂ ವಿಜ್ಞಾನ ಸಂಶೋಧನಾ ಸಂಸ್ಥೆಗಳನ್ನು ಸ್ಥಾಪಿಸಲಾಯಿತು. ಈ ಸಂಸ್ಥೆಗಳ ಸ್ಥಾಪನೆಯಲ್ಲಿ ಕೆಲವು ಸಂದರ್ಭಗಳಲ್ಲಿ ವಿದೇಶದ ತಜ್ಞರ ಸಲಹೆ ಮತ್ತು ಸಹಾಯವನ್ನು ಪಡೆಯಲಾಯಿತು. ದೇಶದ ವಿಶ್ವವಿದ್ಯಾನಿಲಯಗಳಲ್ಲಿ ವಿಜ್ಞಾನ ವಿಭಾಗಗಳನ್ನು ವಿಸ್ತರಿಸಿ ಪ್ರಯೋಗಶಾಲೆಗಳಿಗೆ ಹೆಚ್ಚು ಅನುಕೂಲಗಳನ್ನು ಒದಗಿಸಲಾಯಿತು. ವಿಜ್ಞಾನ ಮತ್ತು ಟೆಕ್ನಾಲಜಿಗಳ ಶೈಕ್ಷಣಿಕ ಕ್ರಮ ಮತ್ತು ಪದ್ಧತಿಗಳಲ್ಲಿಯೂ ಅನೇಕ ಸುಧಾರಣೆಗಳನ್ನು ಜಾರಿಗೆ ತರಲಾಯಿತು. ಆದರೆ ಅತ್ಯಾಧುನಿಕ ಟೆಕ್ನಾಲಜಿ ಅವಲಂಭಿತ ಆರ್ಥಿಕ ಬೆಳವಣಿಗೆ ಮಾದರಿಯನ್ನೇ ಮನಸ್ಸಿನಲ್ಲಿಟ್ಟುಕೊಂಡು ಈ ಕ್ರಮಗಳನ್ನೆಲ್ಲಾ ಕೈಗೊಳ್ಳಲಾಯಿತು ಎಂಬುದನ್ನು ಇಲ್ಲಿ ಒತ್ತಿ ಹೇಳಬೇಕಾಗಿದೆ.

ಇದೇ ಕಾಲದಲ್ಲೇ ಜರುಗಿದ ಮತ್ತೊಂದು ಮಹತ್ವದ ಬೆಳವಣಿಗೆಯನ್ನು ಗಮನಿಸುವುದು ಅಗತ್ಯ. ವಿಜ್ಞಾನ ಮತ್ತು ಟೆಕ್ನಾಲಜಿ ಶಿಕ್ಷಣ ಕ್ಷೇತ್ರದ ವಿಸ್ತರಣೆ, ಸುಧಾರಣೆ ಮತ್ತು ವೈವಿಧ್ಯೀಕರಣ ಕ್ರಮಗಳನ್ನು ಕೈಗೊಂಡಮೇಲೂ ಕೆಲವು ವಿಶಿಷ್ಟ ರೀತಿಯ ಪರಿಣತೆಯನ್ನು ಪಡೆದಿರುವ ವಿಜ್ಞಾನಿಗಳನ್ನಾಗಲಿ, ಟೆಕ್ನಾಲಜಿ ತಜ್ಞರನ್ನಾಗಲಿ ಒದಗಿಸಲು ಸಾಧ್ಯವಾಗಲಿಲ್ಲ. ಈ ರೀತಿಯ ಪರಿಣತೆಯನ್ನು ಪಡೆದುಕೊಳ್ಳುವ ಸಲುವಾಗಿ ಕೆಲವು ವಿಜ್ಞಾನಿಗಳನ್ನು ಮತ್ತು ಟೆಕ್ನಾಲಜಿ ತಜ್ಞರನ್ನು ಮುಂದುವರಿದ ರಾಷ್ಟ್ರಗಳಿಗೆ ಕಳುಹಿಸಿವುದು ಅನಿವಾರ್ಯವಾಯಿತು. ಪ್ರಾರಂಭದಲ್ಲಿ ಈ ಶೈಕ್ಷಣಿಕ ವಿದೇಶಿಯಾತ್ರೆ ಅವಶ್ಯವಾದ ಪ್ರಮಾಣದಲ್ಲಿ ನಿಯಂತ್ರಿತಗೊಂಡಿತ್ತಾದರೂ, ಅನೇಕ ಕಾರಣಗಳಿಂದಾಗಿ ಅತಿ ಶೀಘ್ರದಲ್ಲೇ ಸರ್ಕಾರದ ಹತೋಟಿ ಸಡಿಲವಾಗಿ ಅನೇಕ ದುಷ್ಪರಿಣಾಮಗಳು ತಲೆದೋರಿದವು. ನವನವೀನ ಸಮಾಜದ ವ್ಯಾಮೋಹಗಳಿಂದ ಆಕರ್ಷಿತರಾಗಿ ದೇಶದ ಪ್ರತಿಭಾವಂತ ಯುವಜನರಲ್ಲಿ ಅನೇಕರು ಈ ಕ್ಷೇತ್ರದಲ್ಲಿ ಬಲವಾಗಿ ಬೇರೂರಿಕೊಂಡ ಪಟ್ಟ ಭದ್ರ ಹಿತಾಸಕ್ತಿಗಳ ನೆರವಿನಿಂದ ಪ್ರೌಢವ್ಯಾಸಂಗಕ್ಕಾಗಿ ವಿದೇಶಗಳಿಗೆ ತೆರಳಿ ಅಲ್ಲಿಯೇ ನೆಲೆಸುವ ಪರಿಸ್ಥಿತಿ ಏರ್ಪಟ್ಟಿತು. ದೇಶದ ಅವಶ್ಯಕತೆಯನ್ನು ಪೂರೈಸಲು ಬೇಕಾಗುವ ಪ್ರಮಾಣಕ್ಕೂ ಮೀರಿದ ಸಂಖ್ಯೆಯಲ್ಲಿ ವಿದೇಶಗಳಲ್ಲಿ ನಮ್ಮ ಯುವ ಜನರು ತರಪೇತಿ ಪಡೆದು, ಸ್ವದೇಶಕ್ಕೆ ವಾಪಸಾದಾಗ ಅವರಿಗೆ ತಕ್ಕ ಸ್ಥಾನ ಮತ್ತು ಸೌಲಭ್ಯಗಳು ದೊರಕದೆ ಪುನಃ ವಿದೇಶಕ್ಕೆ ತೆರಳಿ ಅಲ್ಲಿಯೇ ನೆಲಸಬೇಕಾದ ಪರಿಸ್ಥಿತಿ ಉದ್ಭವಿಸಿತು. ಈ ರೀತಿಯ ಬೆಳವಣಿಗೆಯಿಂದಾಗಿ ಇಂದು ದೇಶವು ಅನೇಕ ಪ್ರತಿಭಾವಂತ ವಿಜ್ಞಾನಿಗಳ ಉಪಯೋಗವನ್ನು ಕಳೆದುಕೊಳ್ಳಬೇಕಾದ ದುರದೃಷ್ಟಕರ ಪರಿಸ್ಥಿತಿ ಏರ್ಪಟ್ಟಿದೆ. ಕಳೆದ ವರ್ಷದ ಜೂನ್‌ನಲ್ಲಿ ಪ್ರಕಟವಾದ ಅಂಕಿ ಅಂಶಗಳ ಪ್ರಕಾರ ಸುಮಾರು ೧೭,೦೦೦ ಪ್ರತಿಭಾವಂತ ವಿಜ್ಞಾನಿಗಳು, ಟೆಕ್ನಾಲಜಿ ತಜ್ಞರು ಮತ್ತು ಪ್ರೌಢ ವೈದ್ಯರು ಪರದೇಶಗಳಲ್ಲಿಯೇ ಉಳಿದು ಕೊಂಡಿದ್ದಾರೆ.

ಈ ರೀತಿಯ ಪ್ರತಿಭಾ ಪಲಾಯನ ೨೫ ವರ್ಷಗಳಿಂದ ನಾವು ಅನುಸರಿಸಿಕೊಂಡು ಬಂದ ಆರ್ಥಿಕ ನೀತಿ, ಧೋರಣೆ ಮತ್ತು ಬೆಳವಣಿಗೆ ಕ್ರಮ ಇವುಗಳ ಒಂದು ದುರಂತ ಪರಿಣಾಮ ಎಂದರೆ ತಪ್ಪಾಗಲಾರದು. ಎಲ್ಲಿಯವರೆಗೆ ಸರಾಗವಾಗಿ ವಿದೇಶಗಳಿಗೆ ತೆರಳಲು ಅವಕಾಶವಿರುವುದೋ, ಎಲ್ಲಿಯವರೆಗೆ ಸರ್ಕಾರ ಈ ಬೆಳವಣಿಗೆಯ ಬಗ್ಗೆ ಒಂದು ದಿಟ್ಟ ನಿರ್ಧಾರವನ್ನು ಕೈಗೊಂಡು ದೇಶದ ದೃಷ್ಟಿಯಿಂದ ಅನುಪಯುಕ್ತವಾದ ವಿದೇಶಿ ಶಿಕ್ಷಣ ಯಾತ್ರೆಯನ್ನು ನಿಲ್ಲಿಸಲು ಅಶಕ್ತವಾಗಿರುತ್ತದೆಯೋ ಅಲ್ಲಿಯವರೆಗೆ ಪ್ರತಿಭಾ ಪಲಾಯನವನ್ನು ತಡೆಗಟ್ಟುವುದು ಸಾಧ್ಯವಾಗಲಾರದು. ಆದರೆ ಸರ್ಕಾರದ ಆರ್ಥಿಕ ನೀತಿ ಮತ್ತು ಮನೋಭಾವ ತೀವ್ರವಾಗಿ ಬದಲಾಗದ ಹೊರತು ಈ ಪರಿಮಿತ ಪ್ರಶ್ನೆಗೆ ಸಂಬಂಧಪಟ್ಟಂತೆ ಕೂಡ ಒಂದು ದಿಟ್ಟ ನಿರ್ಧಾರ ಕೈಗೊಳ್ಳುವುದು ಅಸಂಭವನೀಯ ಎನ್ನಬಹುದು.

ಪ್ರಾರಂಭದಿಂದಲೂ ಅತ್ಯಾಧುನಿಕ ಟೆಕ್ನಾಲಜಿಯನ್ನಾಧರಿಸಿದ ಬೆಳವಣಿಗೆಯನ್ನೇ ಮಾದರಿಯನ್ನಾಗಿಟ್ಟುಕೊಂಡು ಅದರಂತೆಯೇ ನಮ್ಮ ಅಭಿವೃದ್ಧಿ ಕಾರ್ಯಗಳನ್ನು ಮುಂದುವರಿಸಿಕೊಂಡು ಬಂದುದರ ಕೆಲವು ಸಾಮಾಜಿಕ ಮತ್ತು ಆರ್ಥಿಕ ಪರಿಣಾಮಗಳನ್ನು ಈಗ ಸಂಕ್ಷಿಪ್ತವಾಗಿ ಪರಿಶೀಲಿಸೋಣ. ಮುಂದುವರಿದ ರಾಷ್ಟ್ರಗಳಲ್ಲಿ ಅವುಗಳ ಸಮೃದ್ಧ ಸ್ಥಿತಿಯನ್ನು ಕಾಪಾಡಿಕೊಂಡು ಬಂದಿರುವ ಆಧುನಿಕ ವಿಜ್ಞಾನ ಮತ್ತು ಟೆಕ್ನಾಲಜಿಗಳನ್ನು ಎರವು ಪಡೆದು ಅವುಗಳನ್ನು ಹಾಗೆಯೇ ಬಳಸಿಕೊಂಡು ಈ ರಾಷ್ಟ್ರಗಳು ಯಾವ ರೀತಿ

ಬೆಳೆದು ಸಮೃದ್ಧ ಸ್ಥಿತಿಯನ್ನು ಸಾಧಿಸಿದವೋ ಅದೇ ರೀತಿಯ ಬೆಳವಣಿಗೆಯನ್ನು ಇಲ್ಲಿಯೂ ತ್ವರಿತವಾಗಿ ಮುಂದುವರಿಸಿ ಸ್ವಲ್ಪ ಕಾಲದಲ್ಲೇ ಸಮೃದ್ಧ ಸ್ಥಿತಿಯನ್ನು ಸಾಧಿಸಬಹುದು ಎಂದು ಭಾವಿಸಲಾಯಿತು. ಆದರೆ ಈ ಭಾವನೆ ತಪ್ಪೆಂದೇ ಹೇಳಬೇಕಾಗಿದೆ. ಆ ರಾಷ್ಟ್ರಗಳಲ್ಲಿ ಇಂದು ಪ್ರಚಲಿತವಾಗಿರುವ ವಿಜ್ಞಾನ ಮತ್ತು ಟೆಕ್ನಾಲಜಿಗಳು ಆ ದೇಶಗಳ ಐತಿಹಾಸಿಕ ಬೆಳವಣಿಗೆಯ ಒಂದು ಮುಖ್ಯ ಭಾಗವಾಗಿ ಬೆಳೆದು ಅಂತಿಮವಾಗಿ ಇಂದಿನ ರೂಪವನ್ನು ಪಡೆದುಕೊಂಡಿವೆ ಎಂಬುದು ನಾವು ಗಮನಿಸಬೇಕಾದ ಒಂದು ಮುಖ್ಯ ಅಂಶ. ಈ ಪ್ರಬಲ ರಾಷ್ಟ್ರಗಳು ಹಿಂದೆ ತಮ್ಮ ಆಳ್ವಿಕೆಗೆ ಒಳಪಟ್ಟಿದ್ದ ವಸಹಾತು ದೇಶಗಳಿಂದ ಅಗ್ಗದ ಕಚ್ಚಾ ಸಾಮಗ್ರಿಗಳನ್ನು ಕೊಂಡೊಯ್ಯುತ್ತಿದ್ದುದೇ ಅಲ್ಲದೇ ತಮ್ಮಲ್ಲಿ ತಯಾರಾದ ಕೈಗಾರಿಕಾ ಉತ್ಪನ್ನಗಳನ್ನು ಅಧಿಕ ಬೆಲೆಯಲ್ಲಿ ವಸಹಾತು ದೇಶಗಳಲ್ಲಿ ಮಾರುತ್ತಿದ್ದವು. ಈ ರೀತಿಯ ವಸಹಾತು ಶೋಷಣೆಯ ಪರಿಣಾಮವಾಗಿ ಆ ರಾಷ್ಟ್ರಗಳು ಹೆಚ್ಚಿನ ಪ್ರಮಾಣದಲ್ಲಿ ಸಂಪತ್ತನ್ನು ಮತ್ತು ಹಾಗಯೇ ಕೈಗಾರಿಕಾ ಬಂಡವಾಳವನ್ನೂ ಗಳಿಸಲು ಸಾಧ್ಯವಾಯಿತು. ಇಂದಿನ ದಿನಗಳಲ್ಲೂ ಕೂಡ ಅನಭಿವೃದ್ಧ ರಾಷ್ಟ್ರಗಳನ್ನು ಅಗೋಚರ ರೀತಿಯಲ್ಲಿ ನವ ವಸಹಾತು ಶೋಷಣೆಗೆ ಒಳಪಡಿಸಿ ಈ ಸಮೃದ್ಧ ರಾಷ್ಟ್ರಗಳು ಅನೇಕ ರೀತಿಯಲ್ಲಿ ತಮ್ಮ ಸಂಪತ್ತನ್ನು ಮತ್ತಷ್ಟು ಹೆಚ್ಚಿಸಿಕೊಳ್ಳುತ್ತಿವೆ. ಯಾವುದಾದರೂ ಕಾರಣದಿಂದಾಗಿ ಈ ಶೋಷಣೆ ಅಂತ್ಯಗೊಂಡದ್ದೇ ಆದರೆ ಸಮೃದ್ಧ ರಾಷ್ಟ್ರಗಳು ತಮ್ಮ ಇಂದಿನ ಸಮೃದ್ಧ ಸ್ಥಿಯನ್ನು ಅದೇ ಮಟ್ಟದಲ್ಲಿ ಮುಂದುವರಿಸಿಕೊಂಡು ಹೋಗುವುದು ಬಹು ದುಸ್ತರವೇ ಆಗುವುದರಲ್ಲಿ ಸಂದೇಹವಿಲ್ಲ.

ನಮ್ಮ ದೇಶದ ಆರ್ಥಿಕ ಬೆಳವಣಿಗೆ ಇಪ್ಪತ್ತನೆ ಶತಮಾನದ ಉತ್ತರಾರ್ಧದಲ್ಲಿ ಸಾಗುತ್ತಿದೆ ಎಂಬುದನ್ನು ಗಮನಿಸಿದರೆ, ನಮ್ಮ ರಾಷ್ಟ್ರದ ಆರ್ಥಿಕ ಬೆಳವಣಿಗೆಯ ಚಾರಿತ್ರಿಕ ಹಿನ್ನೆಲೆ ಮತ್ತು ಸನ್ನಿವೇಶಗಳು, ಇಂದು ಪ್ರಬಲವಾಗಿ ಇರುವ ರಾಷ್ಟ್ರಗಳು ಎರಡು ಮೂರು ಶತಮಾನಗಳ ಹಿಂದೆ ತಮ್ಮ ಬೆಳವಣಿಗೆಯನ್ನು ಪ್ರಾರಂಭಿಸಿದಾಗ ಇದ್ದ ಅವುಗಳ ಚಾರಿತ್ರಿಕ ಹಿನ್ನೆಲೆ ಮತ್ತು ಸನ್ನಿವೇಶಗಳಿಂದ ವಿಭಿನ್ನವಾಗಿರುವ ಕಾರಣ ಪ್ರಬಲ ರಾಷ್ಟ್ರಗಳಿಗೆ ದೊರೆತ ಅವಕಾಶಗಳಾವುದೂ ನಮಗೆ ಒದಗಿಬರುವುದು ಸಾಧ್ಯವೇ ಇಲ್ಲ, ಈ ಕಾರಣದಿಂದಾಗಿ ನಾವು ಎಷ್ಟೇ ತ್ವರಿತಗತಿಯಲ್ಲಿ ಮುಂದುವರಿಯಲು ಪ್ರಯತ್ನಿಸಿದರೂ ನಮ್ಮ ಆರ್ಥಿಕ ಬೆಳವಣಿಗೆ ಆ ರಾಷ್ಟ್ರಗಳ ಬೆಳವಣಿಗೆಯ ಮಾದರಿಯಂತೆ ಜರುಗುವುದು ಸಾಧ್ಯವೇ ಇಲ್ಲ ಎಂಬುದು ಖಚಿತವಾಗುತ್ತದೆ. ಆದಷ್ಟು ಜಾಗ್ರತೆ ನಮ್ಮ ರಾಷ್ಟ್ರ ಶ್ರೀಮಂತವಾಗಬೇಕೆಂಬ ಕಾತುರತೆಯಿಂದಾಗಿ ನಾವು ಈ ಎಲ್ಲ ಅಂಶಗಳನ್ನೂ ಬದಿಗೊತ್ತಿ ನಮ್ಮ ದೇಶದ ಚಾರಿತ್ರಿಕ ಹಾಗೂ ಸಾಂಸ್ಕೃತಿಕ ಹಿನ್ನೆಲೆಗಳನ್ನೂ ಗಮನಿಸದೆ, ನಮ್ಮ ದೇಶಕ್ಕೆ ಅಷ್ಟಾಗಿ ಸರಿ ಹೊಂದದ ಬೆಳವಣಿಗೆ ಮಾದರಿಯನ್ನು ೨೫ ವರ್ಷಗಳ ಕಾಲ ಮುಂದುವರಿಸಿಕೊಂಡು ಬಂದಿರುವುದು ನಿಜಕ್ಕೂ ಆಶ್ಚರ್ಯದ ವಿಷಯವೇ ಸರಿ.

ಇದಲ್ಲದೆ ಅತ್ಯಾಧುನಿಕ ಟೆಕ್ನಾಲಜಿ ಆಧಾರಿತ ಕೈಗಾರಿಕಾ ಬೆಳವಣಿಗೆ ಮಾರ್ಗವನ್ನು ಹಿಡಿದುದರ ಫಲವಾಗಿ ನಮ್ಮ ದೇಶವು ಕೆಲವು ಅನಿವಾರ್ಯ ಒತ್ತಡಗಳಿಗೊಳಗಾಗಿ ಅವುಗಳಿಂದ ಪಾರಾಗುವ ಅವಕಾಶವೇ ಇಲ್ಲದ ಪೇಚಿಗೆ ಸಿಕ್ಕಿಕೊಂಡಿದೆ. ನಮ್ಮ ತ್ವರಿತ ಅಭಿವೃದ್ಧಿಯ ಕಾತುರತೆಯಿಂದಾಗಿ, ಮೂಲ ಮತ್ತು ಪ್ರಾಥಮಿಕ ಕೈಗಾರಿಕಾ ಸ್ಥಾವರಗಳನ್ನು ಆದಷ್ಟು ಜಾಗ್ರತೆ ಸ್ಥಾಪಿಸುವ ಉದ್ದೇಶದಿಂದ ವಿದೇಶಿ ಆರ್ಥಿಕ ಹಾಗೂ ಟೆಕ್ನಾಲಜಿ ನೆರವನ್ನು ಪಡೆದುದೇ ಅಲ್ಲದೆ ಅವರ ಒತ್ತಾಯಕ್ಕೆ

ಒಳಗಾಗಿ ಈ ಸ್ಥಾವರಗಳ ಸ್ಥಾಪನೆ ಕಾರ್ಯವನ್ನು ವಿದೇಶಿ ತಜ್ಞರ ತಂಡಗಳಿಗೆ ವಹಿಸಲಾಯಿತು. ವಿದೇಶಿ ರಾಷ್ಟ್ರಗಳಾದರೋ ಕೈಗಾರಿಕಾ ಸ್ಥಾವರಗಳ ಸ್ಥಾಪನೆಯ ನಕಾಶೆ ತಯಾರಿಕೆಯಿಂದ ಹಿಡಿದು ಎಲ್ಲ ಹಂತಗಳ ನಿರ್ವಹಣೆಯಲ್ಲೂ ತಮ್ಮ ದೇಶದ ತಜ್ಞರನ್ನೇ ಉಪಯೋಗಿಸಿಕೊಂಡು ಸ್ಥಾವರಗಳ ನಕಾಶೆ, ತಯಾರಿಕಾ ನಕ್ಷೆ, ಸ್ಥಾವರಗಳಲ್ಲಿ ಉಪಯೋಗಿಸುವ ಯಂತ್ರಗಳು, ಸ್ಥಾವರಗಳಿಗೆ ಸಂಬಂಧಪಟ್ಟ ತಾಂತ್ರಿಕಜ್ಞಾನ, ಉತ್ಪನ್ನ ವಿಧಾನ ಇವೆಲ್ಲವನ್ನೂ ತಮ್ಮ ದೇಶದ ತಜ್ಞರಿಂದಲೇ ಪೂರ್ತಿಯಾಗಿ ಒದಗಿಸಿಕೊಡುತ್ತಿದ್ದುದೇ ಅಲ್ಲದೇ ಈ ಸ್ಥಾವರಗಳ ಸ್ಥಾಪನೆಗೆ ಅವಶ್ಯವಾದ ಬಂಡವಾಳದ ಗಮನಾರ್ಹ ಭಾಗವನ್ನು ತಮಗೆ ಹೆಚ್ಚಿನ ಪ್ರತಿ ಫಲ ದೊರಕುವ ರೀತಿಯಲ್ಲಿ ಸಾಲದ ರೂಪದಲ್ಲಿ ನೀಡಿ ತಮ್ಮ ತಮ್ಮ ಆರ್ಥಿಕ ಹತೋಟಿಯನ್ನು ಬಲಪಡಿಸಿಕೊಂಡವು. ಸ್ಥಾವರಗಳ ಸ್ಥಾಪನೆಯ ಕಾರ್ಯಚರಣೆಗಳಲ್ಲಿ ಪಾಲ್ಗೊಳ್ಳಲು ಅವಕಾಶ ದೊರಕದ ಕಾರಣ, ನಮ್ಮ ದೇಶದ ತಜ್ಞರಿಗೆ ಉಳಿದ ಕೆಲಸವೇನೆಂದರೆ ಈ ಸ್ಥಾವರಗಳನ್ನು ನಡೆಸಿಕೊಂಡು ಬರುವುದು, ಮತ್ತು ಅವು ಕೆಟ್ಟು ಹೋದಾಗ ಸಣ್ಣ ಪುಟ್ಟ ರಿಪೇರಿ ಕೆಲಸ ಮಾಡುವುದು. ಇದರಿಂದಾಗಿ, ಸ್ಥಾವರಗಳ ಕಾರ್ಯಾಚರಣೆಯಲ್ಲಿ ಹೆಚ್ಚಿನ ತೊಂದರೆ ಏನಾದರೂ ಉದ್ಭವಿಸಿದಲ್ಲಿ ಇದರ ನಿವಾರಣೆಗಾಗಿ ವಿದೇಶಿ ತಜ್ಞರನ್ನು ಕರೆಸಿ ಅವರ ಸಹಾಯದಿಂದ ಸ್ಥಾವರಗಳ ಯಂತ್ರಗಳನ್ನು ಕಾರ್ಯದಕ್ಷಗೊಳಿಸುವುದು ಅನಿವಾರ್ಯವಾಯಿತು. ಇತ್ತೀಚೆಗೆ ಈ ಪರಿಸ್ಥಿತಿ ಬಹು ಮಟ್ಟಿಗೆ ಸುಧಾರಿತವಾಗಿದೆ ಎಂಬುದು ಸ್ವಲ್ಪ ಸಂತೋಷದ ಸಂಗತಿ ಸ್ಥಾವರದ ಯಂತ್ರಗಳೆಲ್ಲವನ್ನೂ ವಿದೇಶಿ ರಾಷ್ಟ್ರಗಳಿಂದಲೇ ಪಡೆದ ಕಾರಣದಿಂದಾಗಿ, ಯಂತ್ರಗಳಿಗೆ ಬೇಕಾದ ಕೆಲವು ಮುಖ್ಯ ಬಿಡಿ ಭಾಗಗಳನ್ನೂ ಆ ದೇಶಗಳಿಂದಲೇ ಆಮದು ಮಾಡಿಕೊಳ್ಳುವುದು ಅನಿವಾರ್ಯವಾಯಿತು. ಈ ಎಲ್ಲದುದರ ಒಟ್ಟು ಪರಿಣಾಮವೆಂದರೆ, ಹೊಸ ಸ್ಥಾವರಗಳನ್ನು ಸ್ಥಾಪಿಸುವುದಕ್ಕೆ ಮತ್ತು ಸ್ಥಾಪಿತವಾದ ಸ್ಥಾವರಗಳ ಯಂತ್ರಗಳ ಬಿಡಿ ಭಾಗಗಳನ್ನು ಸಾಕಷ್ಟು ಪ್ರಮಾಣದಲ್ಲಿ ಆಮದುಮಾಡಿಕೊಳ್ಳುವುದಕ್ಕೆ ಸತತವಾಗಿ ವಿದೇಶಿ ನೆರವನ್ನು ಪಡೆಯುವುದು ಅನಿವಾರ್ಯವಾಯಿತು. ಹೀಗೆ ಸತತವಾಗಿ ವಿದೇಶಿ ನೆರವನ್ನು ಪಡೆಯುವುದು ನಮ್ಮ ಆರ್ಥಿಕ ಬೆಳವಣಿಗೆಯ ಒಂದು ಅನಿಷ್ಟ ಲಕ್ಷಣವಾಗಿ ಪರಿಣಮಿಸಿದೆ.

ಆರ್ಥಿಕ ಬೆಳವಣಿಗೆಯಲ್ಲಿ ನಾವು ಅನುಸರಿಸಬೇಕಾದ ಕ್ರಮದಿಂದಾಗಿ ವಿದೇಶಿ ತಜ್ಞರಿಂದ ಸ್ಥಾಪಿತವಾದ ಕೈಗಾರಿಕಾ ಸ್ಥಾವರಗಳಲ್ಲದೇ ನಮ್ಮವರೇ ಸ್ಥಾಪಿಸಿದ ಇತರ ಕೈಗಾರಿಕಾ ಸ್ಥಾವರಗಳಿಗೆ ಸಂಬಂಧಿಸಿದಂತೆಯೂ ಕೂಡ ಸ್ಥಾವರಗಳ ರಚನಾ ನಕಾಸೆ, ಸ್ಥಾವರಗಳ ನಿರ್ವಹಣೆಗೆ ಅವಶ್ಯವಾದ ತಾಂತ್ರಿಕ ಜ್ಞಾನ ಇತ್ಯಾದಿ ಅವಶ್ಯಕತೆಗಳನ್ನು ದುಬಾರಿ ವೆಚ್ಚದಲ್ಲಿ ಪರದೇಶಗಳಿಂದ ಪಡೆಯುವುದು ಅನಿವಾರ್ಯವೇ ಆಯಿತು. ಇದರಿಂದಾಗಿ ಪರದೇಶದವರಿಗೆ ಅವರಿಂದ ಪಡೆದ ಈ ರೀತಿಯ ತಾಂತ್ರಿಕ ಸೌಲಭ್ಯಗಳಿಗಾಗಿ ಸತತವಾಗಿ ಸ್ವಾಮ್ಯ ಹಣವನ್ನು ಕೊಡುವುದು ಅಗತ್ಯವಾಯಿತು. ದೇಶದ ಆರ್ಥಿಕ ಬೆಳವಣಿಗೆ ಈ ರೀತಿ ಮುಂದುವರಿದಂತೆ ವಿದೇಶಿ ಪಟ್ಟಭದ್ರ ಹಿತಾಶಕ್ತಿಗಳ ಹಿಡಿತ ಹೆಚ್ಚಿ ನಮ್ಮ ಆರ್ಥಿಕ ಬೆಳವಣಿಗೆಯಲ್ಲಿ ಅವರ ಪಾತ್ರ ಅನೇಕ ರೀತಿಯಲ್ಲಿ ವಿಸ್ತಾರಗೊಂಡಿತು. ದೇಶಿಯ ಕೈಗಾರಿಕಾ ಮತ್ತು ಇತರ ಉದ್ಯಮಗಳಲ್ಲಿ ವಿದೇಶಿ ಬಂಡವಾಳದಾರರು ಪಾಲುದಾರರಾದುದೇ ಅಲ್ಲದೆ ಅವರು ತಮ್ಮ ಬಂಡವಾಳವನ್ನು ಹೂಡಿ ಅನೇಕ ಹೊಸ ಹೊಸ ಉದ್ಯಮಗಳನ್ನು ಸ್ಥಾಪಿಸಿ ಅಧಿಕ ಲಾಭವನ್ನು ಗಳಿಸಿಕೊಳ್ಳಲು ಅವಕಾಶವಾಯಿತು.

ತೋರಿಕೆಗೆ ಭಾರತೀಯ ನಾಮಾಂಕಿತವನ್ನು ಹೊತ್ತಿರುವ ಅನೇಕ ಭಾರಿ ಭಾರತೀಯ ಉದ್ಯಮಗಳಲ್ಲಿ ವಿದೇಶಿ ಬಂಡವಾಳದ ಕೈವಾಡ ಸಾಕಷ್ಟು ಪ್ರಮಾಣದಲ್ಲಿ ಇದ್ದು ಅನೇಕ ಸಂದರ್ಭಗಳಲ್ಲಿ ಲಾಭದ ಬಹು ಪಾಲು ವಿದೇಶಿ ಬಂಡವಾಳದಾರರ ಕೈಸೇರುತ್ತಿರುವ ವಿದ್ಯಮಾನಗಳು ಅಪರೂಪದ ವಿಷಯಗಳೇನೂ ಅಲ್ಲ.


ಈ ಬೆಳವಣಿಗೆಗಳೆಲ್ಲದರ ಪರಿಣಾಮವಾಗಿ ನಮ್ಮ ದೇಶದಲ್ಲಿ ವಿಜ್ಞಾನ ಮತ್ತು ಟೆಕ್ನಾಲಜಿ, ಅಲ್ಲದೆ ಆರ್ಥಿಕ ಬೆಳವಣಿಗೆಯೂ ಕೂಡ, ಇನ್ನೂ ಅವಲಂಬಿತ ದೆಶೆಯಲ್ಲಿಯೇ ಉಳಿದುಕೊಂಡಿದೆ, ದೇಶವು ಸ್ವಸಾಮರ್ಥ್ಯವನ್ನು ಬೆಳಸಿಕೊಂಡು ಸ್ವಾವಲಂಬಿಯಾಗಿ ಪ್ರವರ್ಧಮಾನಕ್ಕೆ ಬರುವ ಕಾಲ ಇನ್ನೂ ಬಹು ದೂರ ಇರುವಂತೆ ಕಾಣುತ್ತದೆ. ವಿಜ್ಞಾನ ಮತ್ತು ಟೆಕ್ನಾಲಜಿಗಳು ಈವರೆಗೂ 'ವರ್ಗಾಯಿತ ಟೆಕ್ನಾಲಜಿ' ಸಂಪ್ರದಾಯದಲ್ಲಿಯೇ ಬೆಳೆದುಬಂದ ಕಾರಣ ಅವು ಇನ್ನೂ ಅನುಕರಣ ಮತ್ತು ಸಹವರ್ತಿ ಸ್ಥಿತಿಯಲ್ಲಿಯೇ ಉಳಿದುಕೊಂಡಿವೆ. ವಿದೇಶಿ ಟಕ್ನಾಲಜಿ ಅವಲಂಬನೆಯ ಕಾರಣದಿಂದಾಗಿ ನಮ್ಮ ದೇಶವು ಅನೇಕ ರೀತಿಯಲ್ಲಿ ವಿದೇಶಿ ಬಂಡವಾಳಶಾಹಿ ವರ್ಗಗಳ ಆರ್ಥಿಕ ಶೋಷಣೆಗೆ ಒಳಗಾಗಿರುವ ಪರಿಸ್ಥಿತಿ ಏರ್ಪಟ್ಟಿದೆ. ಜನರ ಈ ಶೋಷಣೆಯಲ್ಲಿ ಸ್ವದೇಶಿ ಮತ್ತು ವಿದೇಶಿ ಬಂಡವಾಳಶಾಹಿ ವರ್ಗಗಳೆರಡೂ ಪರಸ್ಪರ ಸಹವರ್ತಿಗಳಾಗಿ ಜನರ ಶೋಷಣೆಯ ತೀವ್ರತೆಯನ್ನು ಅಧಿಕಗೊಳಿಸುವಲ್ಲಿ ಅತಿ ಯಶಸ್ವಿಯಾಗಿವೆ.

ಇಪ್ಪತ್ತೈದು ವರ್ಷಗಳ ಕಾಲದಲ್ಲಿ ಜರುಗಿದ ಈ ಎಲ್ಲ ಬೆಳವಣಿಗೆಗಳ ಒಟ್ಟಾರೆ ಪರಿಣಾಮವೆಂದರೆ, ಇಂದು ದೇಶದ ಸಂಪತ್ತು ಮತ್ತು ಸಂಪತ್ ಸಾಧನಗಳು ಅಲ್ಪ ಸಂಖ್ಯೆಯಲ್ಲಿರುವ ಕೆಲವರ ಸ್ವಾಮ್ಯಕ್ಕೆ ಅಧೀನವಾಗಿ ದೇಶದ ಸಾಮಾನ್ಯ ವರ್ಗದ ಬಹುಪಾಲು ಜನರು ಸ್ವಾತಂತ್ರ್ಯಪೂರ್ವದ ದಿನಗಳಲ್ಲಿದ್ದಂತೆ ಬಡತನದಲ್ಲಿ ತೊಳಲುತ್ತಿರುವ ದುರಂತ ದೃಶ್ಯ ನಮ್ಮ ಮುಂದೆ ಎದ್ದು ಕಾಣುತ್ತಿರುವುದು. ವಿಜ್ಞಾನ ಮತ್ತು ಟೆಕ್ನಾಲಜಿಗಳು ತಮ್ಮ ಅದ್ಭುತ ಸಾಧನೆಗಳ ಸಾಧ್ಯತೆ ಸುಖೀರಾಜ್ಯದ ಸ್ಥಾಪನೆಗೆ ಅತಿ ದಕ್ಷ ರೀತಿಯಲ್ಲಿ ನೆರವಾಗಬಲ್ಲ ಸಾಧ್ಯತೆ ಹೊಂದಿರುವುದರಲ್ಲಿ ಯಾವ ಸಂದೇಹವೂ ಇಲ್ಲ. ಆದರೆ ಅವು ಫಲಪ್ರದವಾದ ರೀತಿಯಲ್ಲಿ ಉಪಯೋಗಿಸಲ್ಪಟ್ಟು ತಮ್ಮ ಪೂರ್ಣ ಪ್ರಯೋಜನವನ್ನು ನೀಡಬೇಕಾದರೆ ನಮ್ಮ ದೇಶದ ಪರಿಸ್ಥಿತಿ ಮತ್ತು ಅವಶ್ಯಕತೆಗಳಿಗನುಸಾರವಾಗಿ ಸ್ವತಂತ್ರವಾಗಿ ಬೆಳೆಯಲು ಸರಿಯಾದ ಪರಿಸರವೇರ್ಪಡುವುದು ಅತ್ಯವಶ್ಯಕ. ಮುಖ್ಯವಾಗಿ ನಮ್ಮ ಆರ್ಥಿಕ ಬೆಳವಣಿಗೆಯು ಈ ಇಪ್ಪತ್ತೈದು ವರ್ಷಗಳ ಕಾಲದಲ್ಲಿ ತಪ್ಪು ದಾರಿ ಹಿಡಿದು ವಿಜ್ಞಾನ ಮತ್ತು ಟೆಕ್ನಾಲಜಿಗಳು ಸರಿಯಾಗಿ ಬೆಳೆಯದೆ ಅವು ನಿಷ್ಕ್ರಿಯವಾಗಿರುವಂತೆ ಮಾಡಿರುವುದೇ ಅಲ್ಲದೆ, ಇಂದಿನ ವಿಷಮ ಆರ್ಥಿಕ ಪರಿಸ್ಥಿತಿಯನ್ನು ಸ್ವಲ್ಪಮಟ್ಟಿಗಾದರೂ ಸುಧಾರಿಸುವಲ್ಲಿ ಅವು ತಮ್ಮ ಪಾತ್ರವನ್ನು ನಿರ್ವಹಿಸಲು ಅಶಕ್ತವಾಗಿರುವಂತೆ ಮಾಡಿದೆ. ನಮ್ಮ ಅಭಿವೃದ್ಧಿ ಕಾರ್ಯಾಚರಣೆಗೆ ಸಂಬಂಧಿಸಿದಂತೆ ನಮ್ಮ ನೀತಿ, ಧೋರಣೆ ಮತ್ತು ಯೋಜನೆಗಳು ಮೂಲಭೂತವಾಗಿ ಮಾರ್ಪಾಡಾಗಿ ಸಮರ್ಪಕವಾದ ಹೊಸ ಮಾರ್ಗವನ್ನು ಹಿಡಿಯದಿದ್ದಲ್ಲಿ ಭಾರತೀಯ ಜನತೆಯ ಕಲ್ಯಾಣವನ್ನು ಸಾಧಿಸುವಲ್ಲಿ ಮೂಲತಃ ವಿಜ್ಞಾನ ಮತ್ತು ಟೆಕ್ನಾಲಜಿಗಳು ಅತಿ ಫಲಪ್ರದ ಸಾಧನಗಳಾಗಬಲ್ಲವಾದರೂ ಅವು ಈಗಿನಂತಯೇ ನಿಷ್ಕ್ರಿಯಾವಸ್ಥೆಯಲ್ಲಿ ಮುಂದುವರಿಯುವುದೇ ಅಲ್ಲದೆ, ಇಂದಿನ ಆರ್ಥಿಕ ಬಿಕ್ಕಟ್ಟು ಇನ್ನೂ ವಿಷಮ ಪರಿಸ್ಥಿತಿಯನ್ನು ಮುಟ್ಟುವುದರಲ್ಲಿ ಯಾವ ಸಂದೇಹವೂ ಇಲ್ಲ.

* * *

ಜನಪದ ನಿಲಯದ ಅಂತರಂಗದಲ್ಲಿ..........೩೨

–ಸುರೇಂದ್ರ ಕೌಲಗಿ.



ಭಾರತ ಹಳ್ಳಿಗಳ ದೇಶ. ಹಳ್ಳಿಗಳ ಅಭಿವೃದ್ಧಿಯಾಗದೆ ದೇಶದ ನಿಜವಾದ ಏಳಿಗೆ ಸಾಧ್ಯವಿಲ್ಲ ಎಂಬ ಗಾಂಧೀಜಿಯವರ ಮಾತು ಎಷ್ಟು ವಾಸ್ತವಿಕವೆಂಬುದನ್ನು ಕೆಂಪಿಸಿದ್ಧನ ಹುಂಡಿಯಲ್ಲಿಯ ನನ್ನ ಗ್ರಾಮಸೇವೆ ನನಗೆ ಮನದಟ್ಟು ಮಾಡಿಕೊಟ್ಟಿತು. ೧೯೩೦ರ ದಶಕಗಳಲ್ಲಿ ಈಗ ಬಹುವಾಗಿ ಬಂದಿರುವ ವಿವಿಧ ಪ್ರಕಾರದ ಸರ್ಕಾರ ಆಶ್ರಿತ ಗ್ರಾಮಾಭಿವೃದ್ಧಿ ಯೋಜನೆಗಳು ಜಾರಿಗೆ ಬಂದಿರಲಿಲ್ಲ. ಆದ್ದರಿಂದ ಭಾರತದ ಗ್ರಾಮಗಳಲ್ಲಿ ಈಗ ಬೀಸುತ್ತಿರುವ ಅಭಿವೃದ್ಧಿಯ ಹೆಸರಿನ ಹೊಸ ಬಗೆಯ ರಾಜಕೀಯ ಗಾಳಿ ಬೀಸುತ್ತಿರಲಿಲ್ಲ. ಗ್ರಾಮದ ಜೀವನ ಒಂದರ್ಥದಲ್ಲಿ ನೆಮ್ಮದಿಯ ಮತ್ತು ಶಾಂತಿಪ್ರಧಾನವಾದ ಜೀವನವಾಗಿತ್ತು. ರಾಜಕೀಯದ ಪ್ರವೇಶ ಇಂದಿಷ್ಟು ಆಗ ಆಗಿರಲಿಲ್ಲ. ಆದ್ದರಿಂದ ಗ್ರಾಮಸ್ಥರು ಮುಗ್ಧರಾಗಿದ್ದರು, ತೆರೆದ ಮನಸ್ಸಿನವರಾಗಿದ್ದರು ಹಾಗೂ ಒಳ್ಳೆಯ ವಿಚಾರಗಳನ್ನು ಸ್ವೀಕರಿಸುವಂತವರಾಗಿದ್ದರು. ಈ ಕಾರಣದಿಂದಲೊ ಏನೋ ಹುಂಡಿಯಲ್ಲಿಯ ನನ್ನ ಒಂದು ವರ್ಷದ ಸೇವಾ ಜೀವನದಿಂದಾಗಿ ಗ್ರಾಮದ ಎಲ್ಲ ಜನರು ನನ್ನನ್ನು ಬಹು ಪ್ರೀತಿಯಿಂದಲೂ, ವಿಶ್ವಾಸದಿಂದಲೂ ಕಾಣುತ್ತಿದ್ದರು. ಗ್ರಾಮದ ಯಾವ ಮನೆಗೆ ಹೋದರೂ ನಾನು ಅತಿಥಿಯಾಗಿರದೆ ಆ ಮನೆಯ ಪರಿವಾರದ ಒಬ್ಬ ಸದಸ್ಯನೆಂಬ ಭಾವನೆ ಮನೆಯವರಲ್ಲಿಯೂ ಮತ್ತು ನನ್ನಲ್ಲಿಯೂ ಮೂಡುತ್ತಿತ್ತು. ಸರ್ಕಾರದ ಸಹಾಯವನ್ನು ಪಡೆಯುವ ಬಗ್ಗೆ ಯಾವುದೇ ಪೈಪೋಟಿ ಗ್ರಾಮಸ್ಥರಲ್ಲಿ ಇರುವುದನ್ನು ನಾನು ಕಾಣಲಿಲ್ಲ. ಗ್ರಾಮಸ್ಥರು ತಮ್ಮ ಜೀವನವನ್ನು ಸ್ವಾವಲಂಬಿತವಾಗಿ ನಡೆಸುತ್ತಿದ್ದರು. ಅವರಿಗೆ ಸರ್ಕಾರದ ಅಗತ್ಯತೆಯೆ ಅನಿಸಿರಲಿಲ್ಲ. ಇಂಥ ಪುಟ್ಟ ಗ್ರಾಮವೊಂದನ್ನು ಬಿಟ್ಟು ನಾನು ಮೇಲುಕೋಟೆಗೆ ಹಿಂದಿರುಗಬೇಕಾಯಿತು. ನಾನು ಹುಂಡಿಯನ್ನು ಬಿಟ್ಟು ಹೊರಡುವ ಮೊದಲು ಅನೇಕ ಜನರಿಗೆ ಈ ವಿಷಯವನ್ನು ತಿಳಿಸಿದ್ದೆ. ಆದ್ದರಿಂದ ನಾನು ಹುಂಡಿಯನ್ನು ಬಿಟ್ಟು ಹೊರಡುವ ಸಮಯದಲ್ಲಿ ಅನೇಕರು ಬಂದು ನನ್ನನ್ನು ತಮ್ಮ ಮನೆಗೆ ಬಂದು ತಾಂಬೂಲ ಸ್ವೀಕರಿಸಬೇಕೆಂದು ಒತ್ತಾಯ ಮಾಡಿದರು. ಅವರ ಪ್ರೀತಿಯ ಒತ್ತಾಯಕ್ಕೆ ಮಣಿದು ಅನೇಕರ ಮನೆಗಳಿಗೆ

ಗಿರಿಜಾ ಮತ್ತು ನಾನು ಹೋಗಿ ತಾಂಬೂಲವನ್ನು ಸ್ವೀಕರಿಸಿ ಭಾರವಾದ ಹೃದಯದಿಂದ ಹುಂಡಿಯ ಜನರಿಗೆ ನಮಸ್ಕಾರ ಹೇಳಿ ಮೇಲುಕೋಟೆಗೆ ಪ್ರಯಾಣ ಮಾಡಿದೆವು.

ಮೇಲುಕೋಟೆಗೆ ಆಗಮಿಸಿದ ನಂತರ ನಾವಿಬ್ಬರು ಟ್ರಸ್ಟಿನ ಪೂರ್ಣ ಸಮಯದ ಕಾರ್ಯಕರ್ತರಾಗಿ ಕೆಲಸಮಾಡಲು ಪ್ರಾರಂಭಿಸಿದೆವು. ಈ ಕೆಲಸದ ಮೊದಲ ಹೆಜ್ಜೆಯಾಗಿ ಅಂಗವಿಕಲ ಮಕ್ಕಳ ಸೇವಾಕಾರ್ಯವನ್ನು ಕೈಗೆತ್ತಿಕೊಂಡೆವು. ೭೦ರ ದಶಕದಲ್ಲಿ ಶಾರೀರಿಕ ಅಂಗವಿಕಲತೆಯ ಪ್ರಮಾಣ ದೇಶದಾದ್ಯಂತ ದೊಡ್ಡದಾಗಿತ್ತು. ಅಲ್ಲದೆ ಗ್ರಾಮಾಂತರ ಪ್ರದೇಶದಲ್ಲಿರುವ ಅಂಗವಿಕಲರ ಕ್ಷೇಮಕ್ಕಾಗಿ ಕೆಲಸ ಮಾಡುವಂಥ ಸಂಸ್ಥೆಗಳು ಬಹು ಅಪರೂಪವಾಗಿದ್ದವು. ಅಲ್ಲದೆ ಸಮಾಜದಲ್ಲಿ ಅತ್ಯಂತ ಕೆಳಸ್ಥರದಲ್ಲಿರುವಂಥವರ ಏಳ್ಗೆಯಾಗಬೇಕಾದುದು ಬಹು ಮುಖ್ಯವೆಂದು ಮತ್ತು ಅಂಥ ಕೆಳಸ್ಥರದ ಶ್ರೇಣಿಯಲ್ಲಿ ಅಂಗವಿಕಲರು ಪ್ರಧಾನವಾಗಿದ್ದುದರಿಂದ ದೈಹಿಕ ಅಂಗವಿಕಲರಿಗಾಗಿ ಕಾರ್ಯಕ್ರಮ ಪ್ರಾರಂಭಿಸಬೇಕೆಂದು ಸಹಜವಾಗಿ ಒಂದು ವಿಚಾರ ಮನಸ್ಸಿನಲ್ಲಿ ಮೂಡಿತು. ಅದೇ ಹೊತ್ತಿನ ಸುಮಾರಿನಲ್ಲಿ ಕೇಂದ್ರ ಸರ್ಕಾರವು ಅಂಗವಿಕಲರಿಗಾಗಿ ಸೇವೆ ಮಾಡುವ ಸಂಸ್ಥೆಗಳಗೆ ಅನುದಾನ ಕೊಡುವ ತನ್ನ ಯೋಜನೆಯನ್ನು ಪತ್ರಿಕೆಯಲ್ಲಿ ಪ್ರಕಟಿಸಿತ್ತು. ಆ ಒಂದು ಸುದ್ದಿ ನನ್ನ ಕಣ್ಣಿಗೆ ಆಕಸ್ಮಿಕವಾಗಿ ಬಿತ್ತು. ಸರ್ಕಾರ ಧನಸಹಾಯ ಕೊಡುತ್ತದೆಂಬ ಕಾರಣಕ್ಕಿಂತ ಹೆಚ್ಚಾಗಿ ಗ್ರಾಮೀಣ ಪ್ರದೇಶದಲ್ಲಿರುವ ಅಂಗವಿಕಲರಿಗೆ ಸೇವೆ ಸಲ್ಲಿಸಬೇಕೆಂಬ ಇಚ್ಛೆಯೆ ಬಲವತ್ತರವಾಗಿತ್ತು. ಆದುದರಿಂದ ಅಂಗವಿಕರಿಗಾಗಿ ವಸತಿ ಸೌಕರ್ಯವುಳ್ಳ ಶೈಕ್ಷಣಿಕ ಕಾರ್ಯಕ್ರಮವನ್ನು ಕೈಗೊಳ್ಳಲು ನಿಶ್ಚಯ ಮಾಡಿಕೊಂಡು ಈ ವಿಷಯವನ್ನು ಕುರಿತು ಶ್ರೀ ಬಿ.ಆರ್.ಪ್ರಾಣೇಶರವರೊಂದಿಗೆ ಚರ್ಚೆ ಮಾಡಲು ಮೈಸೂರಿಗೆ ಹೋದೆ. ಪ್ರಾಣೇಶರಾವ್ ಈ ಮೊದಲೇ ತಿಳಿಸಿದಂತೆ ನನ್ನ ಸಾರ್ವಜನಿಕ ಕೆಲಸಕ್ಕೆ ಸದಾ ಪ್ರೋತ್ಸಾಹ ಕೊಡುವಂಥವರು ಮತ್ತು ಧೈರ್ಯವನ್ನು ತುಂಬುವಂಥವರಾಗಿದ್ದರು. ಅವರಲ್ಲಿ ನನ್ನ ಈ ವಿಚಾರವನ್ನು ಪ್ರಸ್ತಾಪಿಸಿದಾಗ ಪ್ರಾಣೇಶರಾವ್ ಗಾಂಧಿ ವಿಚಾರವನ್ನು ಪ್ರೀತಿಸುತ್ತಿದ್ದ ವ್ಯಕ್ತಿಯಾಗಿದ್ದರಿಂದ. ಗಾಂಧೀಜಿಯವರ ಪ್ರಕಾರ ಸಮಾಜದ ಏಳ್ಗೆ ಅಂತ್ಯೋದಯದಿಂದ ಪ್ರಾರಂಭವಾಗಬೇಕು ಈ ವಿಚಾರದ ಬೆಳಕಿನಲ್ಲಿ ಅಂಗವಿಕಲರ ಸೇವೆ ಒಂದು ಸೂಕ್ತವಾದ ಕಾರ್ಯಕ್ರಮವಾಗಿದೆ. ಇದನ್ನು ಕೈಗೆತ್ತಿಕೊಳ್ಳಬಹುದೆಂದು ಹೇಳಿ ತಮ್ಮ ನೈತಿಕ ಬೆಂಬಲಕೊಟ್ಟರು.

........ಮುಂದುವರಿಯುವುದು

* * *

ವಾಚಕ ಮಿತ್ರರಲ್ಲಿ ವಿನಂತಿ.

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.

ಸದ್ಯಕ್ಕೆ ಕರ್ನಾಟಕದಲ್ಲಿ ಗಾಂಧೀ ವಿಚಾರವನ್ನು ಮುಖ್ಯವಾಗಿ, ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ರಿಕೆ 'ಜನಪದ ವಿಚಾರ' ಒಂದೆ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜಹಿತ ವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಅದರಲ್ಲಿಯೂ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯುಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದ್ದೇವೆ. ನೀವು ಸಹ ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ನಿಮ್ಮನ್ನು ಜನಪದ ವಿಚಾರದ ಲೇಖಕರ ಬಳಗಕ್ಕೆ ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳ ಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಗಳನ್ನು ಬರೆದು ಆಯಾ ತಿಂಗಳ 15 ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕೆಂದು ಕೋರುತ್ತೇವೆ.

–ಸಂಪಾದಕರು

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ

(–ಸಂಪಾದಕರು)

ತೆರೆದ-ಅಂಚೆ

KA / SK / MND / 470 / 2006-2008
Regd. no. KAR / KAN / 2000 / 3820

ಶ್ರೀಮತಿ/ ಶ್ರೀ..

....

....

jANAPADA VICHARA - Kannada Monthly Digest Edited Printed and Published by Surendra Koulagi at Janapada Seva Trust Printing Press, Melkote on behalf of Janapada Seva Trust, ® . Melkote. Dist- mandya – 571431
Phone : 08236 – 298754 e-mail : janapada@yahoo.com